ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

# ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ

(ಅನುದಾನಿತ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜಿತ, ಎನ್.ಸಿ.ಟಿ.ಇ.ಯ ಮಾನ್ಯತೆ, ಯು.ಜಿ.ಸಿ ಅಧಿನಿಯಮ 2(f), ಸೆಕ್ಷನ್ 12(B) ಮನ್ನಣೆ ಪಡೆದಿದೆ ಹಾಗೂ ನ್ಯಾಕ್‌ನಿಂದ ಸಿ.ಜಿ.ಪಿ.ಎ 2.70 ಅಂಕಗಳೊಂದಿಗೆ "B" ಶ್ರೇಣಿ ಮಾನ್ಯತೆ ಹೊಂದಿದೆ)

ಶಿವಮೊಗ್ಗ ರಸ್ತೆ ಶಿಕಾರಿಪುರ–577 427 ಶಿವಮೊಗ್ಗ ಜಿಲ್ಲೆ

Phone : 08187 – 222383, 222067 E-Mail: kumadvathibed@gmail.com


# ಸಮಾಜ ವಿಜ್ಞಾನ ಸಂಘ – 2021


## Social Science Club - 2021






# ಲೇಖನಗಳ ಸಂಗ್ರಹ


"ಇತಿಹಾಸ ತಿಳಿದವರು ಇತಿಹಾಸ ಸೃಷ್ಟಿಸಬಲ್ಲರು"


the father
OF HISTORY


ARISTOTLE (384-322 BC)
FATHER OF POLITICAL SCIENCE


Auguste Comte
Father of
Positive
Philosophy and sociology


ADAM SMITH:
THE FATHER
OF ECONOMICS
iSchoolConnect


ERATOSTHENES
FATHER OF
GEOGRAPHY

# ಸಮಾಜ ವಿಜ್ಞಾನ ಸಂಘ

**ರಾಷ್ಟ್ರಪತಿಗಳು**




**ಡಾ. ಶಿವಕುಮಾರ ಜಿ. ಎಸ್**
**ಪ್ರಾಚಾರ್ಯರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

**ಪ್ರಧಾನ ಮಂತ್ರಿಗಳು**



**ಶ್ರೀ ದೇವರಾಜ ವೈ**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

**ಉಪ ಪ್ರಧಾನ ಮಂತ್ರಿಗಳು**



**ಡಾ. ವಾಣಿನಾಯಕಿ ಡಿ.ಸಿ**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

## ಸಭಾ ಪತಿಗಳು



ವಿದ್ಯಾಶ್ರೀ ಡಿ ಹೆಚ್

ಪ್ರಶಿಕ್ಷಣಾರ್ಥಿ, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

## ಮಂತ್ರಿ ಮಂಡಲ

### ಬಿ.ಇಡಿ ಪ್ರಶಿಕ್ಷಣಾರ್ಥಿಗಳು, ನಾಲ್ಕನೇ ಸೆಮಿಸ್ಟರ್



ಅಕ್ಷತಾ ಎನ್.ಬಿ



ಅಶ್ವಿನಿ ಡಿ.ಎಸ್



ಮಾಲಾ ಎಂ



ಮೇಘನಾ ವಿ



ರಶ್ಮಿ ಎಂ



ಸಾಕಮ್ಮ ಎಂ.ಎಸ್



ಶೃತಿ ಡಿ. ಬಿ



ಶೃತಿ ಕೆ. ಪಿ



ಉಷಾ ಹೆಚ್



ಉಷಾ ಎನ್



ಅರ್ಪಿತ ಟಿ ಕೆ

## ಬಿ.ಇಡಿ ಪ್ರಶಿಕ್ಷಣಾರ್ಥಿಗಳು, ಎರಡನೇ ಸೆಮಿಸ್ಟರ್



ಬಿ.ಬಿ ಜನಿರಾಜಿ.



ಉಮಾದೇವಿ



ಕಾವ್ಯ ಉಪ್ಪನಾಸಿ



ಮಂಜುಳಾ ಸಿ



ಪದ್ಮಾ ಜಿ



ರಚನಾ



ರೇಣುಕಾ ಡಿ



ಶ್ವೇತಾ ಜಿ.ಹೆಚ್



ಶ್ವೇತಾ ಎಲ್



ಪ್ರಿಯಾಂಕ ಬಿ.ಎನ್



ಪ್ರೇಮಾ ಬಿ



ಶಶಿಕುಮಾರ್ ಜಿ



ಮೌಲಾಲಿ ಕೆ.ಟಿ

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯಾಂಶ | ಪುಟ ಸಂಖ್ಯೆ |
|---|---|---|
| 1 | ಕನಕದಾಸರು | 8–10 |
| 2 | ಛತ್ರಪತಿ ಶಿವಾಜಿ | 11–12 |
| 3 | ಝಾನ್ಸಿ ರಾಣಿ ಲಕ್ಷ್ಮಿಬಾಯಿ | 13–14 |
| 4 | ಕಿತ್ತೂರು ರಾಣಿ ಚೆನ್ನಮ್ಮ | 15–16 |
| 5 | ಸ್ವಾಮಿ ವಿವೇಕಾನಂದ | 17–18 |
| 6 | ಸ್ವಾಮಿ ವಿವೇಕಾನಂದರ ಚಿಕಾಗೋ ಸಮ್ಮೇಳನದ ಮಾತು | 19–20 |
| 7 | ದಾದಾ ಭಾಯಿ ನವರೋಜಿ | 21–22 |
| 8 | ಚಂದ್ರಶೇಖರ್ ಆಜಾದ್ | 23–24 |
| 9 | ಬಸವಣ್ಣ | 25 |
| 10 | ಬಾಲಗಂಗಾಧರ್ ತಿಲಕ್ | 26 |
| 11 | ಸರ್ ಎಂ ವಿಶ್ವೇಶ್ವರಯ್ಯ | 27–28 |
| 12 | ಜವಾಹರಲಾಲ್ ನೆಹರು | 29–30 |
| 13 | ಲಾಲ್ ಬಹದ್ದೂರಶಾಸ್ತ್ರಿ | 31–32 |
| 14 | ಭಗತ್‌ಸಿಂಗ್ | 33–34 |
| 15 | ಮಹಾರಾಣಾ ಪ್ರತಾಪ್ ಸಿಂಗ್ | 35–36 |

| | | |
|---|---|---|
| 16 | ಸ್ತ್ರೀಶಕ್ತಿ ಯೋಜನೆ | 37–39 |
| 17 | ಅನ್ನಿಬೆಸೆಂಟ್ | 40–41 |
| 18 | ಭಾರತದ ಮೊದಲ ಬಜೆಟ್ ರಚಿಸಿದ ಜೇಮ್ಸ್‌ವಿಲ್ಸನ್ | 42–43 |
| 19 | ಮಹಿಳಾ ದಿನಾರಣೆಯ ಇತಿಹಾಸ | 44 |
| 20 | ಕರ್ನಾಟಕದ ವಾಸ್ತುಶಿಲ್ಪ | 45–46 |
| 21 | National Unity Day-Salute to the Unifier of India | 47–48 |
| 22 | Jallianwal Bagh massacre | 49–50 |
| 23 | Martyr’s Day | 51 |
| 24 | Quit India Day | 52 |
| 25 | Kargil Vijay Diwas: India's fallen heroes | 53–56 |

## ಕನಕದಾಸರು

ಶ್ರೀ ಕನಕದಾಸರು[ಮೂಲ ಹೆಸರು –ತಿಮ್ಮಪ್ಪನಾಯಕ] (1508–1606) ಕರ್ನಾಟಕದಲ್ಲಿ 15–16 ನೆಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಶೂದ್ರದಾಸರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು, ಮತ್ತು ಪುರಂದರದಾಸರೊಂದಿಗೆ ಕರ್ನಾಟಕ ಸಂಗೀತದ ಮೂಲಭೂತ ಸಿದ್ಧಾಂತಗಳಿಗೆ ಕಾಣಿಕೆಯನ್ನಿತ್ತವರು. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಲಾಗಿದೆ. ಕನಕದಾಸರು ದಂಡನಾಯಕರಾಗಿದ್ದು ಯುದ್ಧವೊಂದರಲ್ಲಿ ಸೋತ ಅವರಿಗೆ ಉಪರತಿ/ವೈರಾಗ್ಯ ಉಂಟಾಗಿ, ಹರಿಭಕ್ತರಾದರಂತೆ.

**ಜನನ:**

ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ 1509ರಲ್ಲಿ ಕುರುಬ ಜನಾಂಗಕ್ಕೆ ಸೇರಿದ ಬಚ್ಚಮ್ಮ ಮತ್ತು ಬೀರಪ್ಪನಾಯಕ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಕನಕದಾಸರು ಬರಿ ಕುರುಬ ಜಾತಿಗೆ ಸೀಮಿತವಾದ ಭಕ್ತರಲ್ಲ ಎಲ್ಲಾ ಜಾತಿಗಳಿಗೆ ಬೇಕಾದವರು. 15–16 ನೆಯ ಶತಮಾನದಲ್ಲೇ ಜಾತಿ ವ್ಯವಸ್ಥೆಯ ಬಗ್ಗೆ ಸಮರ ಸಾರಿದ ಭಕ್ತ ಎಂದರೆ ಕನಕದಾಸರು ಎಂದರೆ ತಪ್ಪಾಗಲಾರದು. ಕನಕದಾಸರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.

**ಐತಿಹ್ಯ:**

ಸುಮಾರು ಐದು ನೂರು ವರ್ಷಗಳ ಹಿಂದಿನ ಮಾತು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಬಂಕಾಪುರ ಪ್ರಾಂತದ ಮುಖ್ಯಪಟ್ಟಣದ ಹೆಸರು ಬಾಡ ಎಂದು. ವಿಜಯನಗರದಿಂದ ಗೋವಾಕ್ಕೆ ಹೋಗುವ ಹೆದ್ದಾರಿ. ಈ ಬಾಡದಿಂದಲೇ ಹಾಯ್ದು ಹೋಗುತ್ತಿತ್ತು. ಬಾಡ ಒಳ್ಳೇ ಆಯಕಟ್ಟಿನ ಸ್ಥಳ. ಈ ಬಂಕಾಪುರ ಪ್ರಾಂತಕ್ಕೆ ಡಣ್ಣಾಯಕ, ಬೀರಪ್ಪನಾಯಕ. (ಡಣ್ಣಾಯಕ ಎಂದರೆ ಆಯಕಟ್ಟಿನ ಸ್ಥಳದಲ್ಲಿ ಕಾದಿಟ್ಟ ಸೈನ್ಯದ ದಳಕ್ಕೆ ಸೇನಾಪತಿ ಎಂದು ನೇಮಿಸಲ್ಪಟ್ಟವನು) ಬೀರಪ್ಪನ ಹೆಂಡತಿ ಬಚ್ಚಮ್ಮ.

ಬೀರಪ್ಪನಾಯಕನಿಗೆ ತಿರುಪತಿ ತಿಮ್ಮಪ್ಪನಲ್ಲಿ ಬಹು ನಂಬಿಕೆ. ದಕ್ಷಿಣದಲ್ಲಿ ಸುಮಾರು ಒಂಬೈನೂರು ವರ್ಷಗಳ ಹಿಂದೆ ಶ್ರೀರಾಮಾನುಜಾಚಾರ್ಯರೆಂಬ ದೊಡ್ಡ ಗುರುಗಳು ಪ್ರಸಿದ್ಧರಾಗಿದ್ದರು. ಅವರು ಸ್ಥಾಪಿಸಿದ ಪಂಥಕ್ಕೆ ಶ್ರೀವೈಷ್ಣವ ಮತವೆಂದು ಹೆಸರು. ಡಣ್ಣಾಯಕ ಬೀರಪ್ಪನಾಯಕ ಮತ್ತು ಆತನ ಮಡದಿ ಬಚ್ಚಮ್ಮ ಇವರು ಶ್ರೀ ವೈಷ್ಣವ ಮತಕ್ಕೆ ಶರಣು ಹೋಗಿದ್ದರು. ಅಂದಿನಿಂದ ಇವರು ಸಹ ತಿರುಪತಿ ವಂಕಟೇಶ್ವರ ಸ್ವಾಮಿಯನ್ನೇ ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಂಡರು.

ಬೀರಪ್ಪ ನಾಯಕ ಮತ್ತು ಬಚ್ಚಮ್ಮರಿಗೆ ಅನೇಕ ದಿನಗಳಿಂದ ಒಂದು ಹಂಬಲವಿತ್ತು. ಅದೇನೆಂದರೆ, ತಮಗೆ ಒಬ್ಬ ಕುಲದೀಪಕನಾದ ಮಗ ಜನಿಸಬೇಕು ಎಂದು. "ವಂಶೋದ್ಧಾರಕನಾದ ಒಬ್ಬ ಮಗನನ್ನು ಕರುಣಿಸು" ಎಂದು ಈ ದಂಪತಿಗಳು ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತಿದ್ದರು. ಅವರ ಆಸೆ ಫಲಿಸಿತು. ಬೀರಪ್ಪ ನಾಯಕ ಮತ್ತು ಬಚ್ಚಮ್ಮರಿಗೆ ಒಬ್ಬ ಮಗ ಜನಿಸಿದ. ತಂದೆ ತಾಯಿಗಳಿಗೆ ಆನಂದವೋ ಆನಂದ. ತಿರುಪತಿ ತಿಮ್ಮಪ್ಪನ ಆಶೀರ್ವಾದ ಎಂದು ಅವರು ತಮ್ಮ ಮಗುವಿಗೆ "ತಿಮ್ಮಪ್ಪ" ಎಂದೇ ನಾಮಕರಣ ಮಾಡಿದರು. ತಿಮ್ಮಪ್ಪ ಜನಿಸಿದ ಕಾಲ ಇಂತದ್ದೇ ಎಂದು ತಿಳಿಯದು; ಹದಿನೈದನೇಯ ಶತಮಾನದ ಕೊನೆಯ ವರ್ಷಗಳಲ್ಲಿ ಹುಟ್ಟಿದರು ಎಂದು ಹೇಳಬಹುದು.

ತಿಮ್ಮಪ್ಪನಾಯಕ ಒಬ್ಬ ಸೇನಾಧಿಪತಿಯ ಮಗನಾಗಿ ಜನಿಸಿದನಷ್ಟೆ. ಬಾಲ್ಯದಲ್ಲಿಯೇ ಅಕ್ಷರಾಭ್ಯಾಸ, ಬಂಕಾಪುರದ ಶ್ರೀನಿವಾಸಾಚಾರ್ಯರ ಬಳಿ ವಿದ್ಯಾಭ್ಯಾಸವಾಗಿ, ವ್ಯಾಕರಣ, ತರ್ಕ, ಮೀಮಾಂಸೆ, ಸಾಹಿತ್ಯಗಳಲ್ಲಿ ಪಾರಂಗತನಾದನು. ಜೊತೆಗೆ ಕತ್ತಿವರಸೆ, ಕುದುರೆ ಸವಾರಿಯನ್ನೂ ಕಲಿತ. ಕೆಲವು ವರ್ಷಗಳಲ್ಲಿ ಬೀರಪ್ಪನಾಯಕ ಮತ್ತು ಬಚ್ಚಮ್ಮ ತೀರಿಕೊಂಡರು. ತಂದೆಯ ಬಳಿಕ ತಿಮ್ಮಪ್ಪ ನಾಯಕ ತನ್ನ ಕಿರಿವಯಸ್ಸಿನಲ್ಲಿಯೇ ಬಂಕಾಪುರ ಪ್ರಾಂತಕ್ಕೆ ಡಣ್ಣಾಯಕನಾದ.

ಕನಕದಾಸರು ತಮ್ಮನ್ನು ತಾವೇ ಸಾವಿನ ದೇವತೆಯಾದ ಯಮನೆಂದು ತಮ್ಮ ಕೃತಿಯಲ್ಲಿ ಬಣ್ಣಿಸಿದ್ದಾರೆ.

**ಸಾಧನೆ:**

ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರು. ವ್ಯಾಸರಾಯದಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಇವರ ಕೀರ್ತನೆಗಳ ಅಂಕಿತ ಕಾಗಿನೆಲೆಯ ಆದಿಕೇಶವರಾಯ ಎಂಬುದು

**ಕನಕ ದಾಸರ ಸಾಹಿತ್ಯ ರಚನೆ:**

ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ, ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ಮುಂಡಿಗೆಗಳ ರೂಪದಲ್ಲಿ ನೀಡಿದ್ದಾರೆ. ಸುಮಾರು 316 ಕೀರ್ತನೆಗಳು ಹಾಗೂ ಇನ್ನಿತರ ಸಾಹಿತ್ಯ ಮಾತ್ರ ಲಭ್ಯವಾಗಿರುವುದನ್ನು ಕಾಣಬಹುದಾಗಿದೆ. ಅವರ ಐದು ಮುಖ್ಯ ಕಾವ್ಯಕೃತಿಗಳು ಇಂತಿವೆ:

| | |
|---|---|
| ಮೋಹನತರಂಗಿಣಿ | ನಳಚರಿತ್ರೆ |
| ರಾಮಧಾನ್ಯ ಚರಿತೆ | ಹರಿಭಕ್ತಿಸಾರ |
| ನೃಸಿಂಹಸ್ತವ (ಉಪಲಬ್ದವಿಲ್ಲ) | ಕನಕದಾಸರ ಕೀರ್ತನಗಳು |

ಕನಕದಾಸರು 316 ಕೀರ್ತನೆಗಳನ್ನು ರಚಿಸಿದ್ದಾರೆ. ಕನಕದಾಸರ ಭಕ್ತಿ ಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಶ್ರೀಹರಿಯನ್ನು ತಮ್ಮ ಧಣಿಯಾಗಿ, ಇನಿಯನಾಗಿ, ಅಣೋರಣೀಯನಾಗಿ, ಮಹತೋಮಹೀಮನಾಗಿ ಅವರು ಕಂಡಿದ್ದಾರೆ. 'ಬಾ ರಂಗ ಎನ್ನ ಮನಕೆ ಎಂದು ಹೃದಯ ಸದನಕ್ಕೆ 'ಎಂದು ಕರೆದು ನೆಲೆ ನಿಲ್ಲಿಸಿಕೊಂಡ ಅನುಭಾವ ಅವರದು. ಒಳಗಣ್ಣಿನಿಂದ ಅವನ ಕಂಡು– 'ಕಂಡೆ ನಾ ತಂಡ ತಂಡ ಹಿಂಡು ದೈವ ಪ್ರಚಂಡ ರಿಪು ಗಂಡ ಉದ್ಧಂಡ ನರಸಿಂಹನ' ಎಂದು ಸಂತೋಷಪಟ್ಟಿದ್ದಾರೆ. 'ಎಲ್ಲಿ ನೋಡಿದರಲ್ಲಿ ರಾಮ' ಎಂಬ ಅನುಭೂತಿಯಲ್ಲಿ ಹರಿಯನ್ನು ಕಂಡ ಬಳಿಕ 'ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು' ಎಂಬ ಧನ್ಯತಾಭಾವ. 'ದಾಸದಾಸರ ಮನೆಯ ದಾಸಿಯರ ಮಗ ಮಂಕುದಾಸ ಮರುಳುದಾಸ ನರಜನ್ಮಹುಳು ಪರಮಪಾಪಿ' ಎಂದು ಕರೆದುಕೊಂಡಿದ್ದ ಅವರು ಜೀವ ಮಾಗಿ ಹಣ್ಣಾದಂತೆ ಪರಮಾತ್ಮನ ಸಾಕ್ಷಾತ್ಕಾರವಾದಂತೆ 'ಆತನೊಲಿದ ಮೇಲೆ ಇನ್ಯಾತರ ಕುಲವಯ್ಯಾ' ಎಂದುಕೊಳ್ಳುತ್ತಾರೆ.

ಜೈನ, ವೀರಶೈವರ ಕಿತ್ತಾಟ, ಮುಸಲ್ಮಾನ ಪ್ರಾಬಲ್ಯ ಇವುಗಳಿಂದ ಸೊರಗಿ ಹೋಗಿದ್ದ ವೈದಿಕ ಧರ್ಮಕ್ಕೆ ಪುನಶ್ಚೇತನ ನೀಡಲು ವ್ಯಾಸರಾಯರಂಥವರು ಶ್ರಮಿಸುತ್ತಿದ್ದ ಕಾಲವದು. ವೈದಿಕ ಸಂಸ್ಕೃತಿಯ ಉತ್ಥಾನಕ್ಕೆಂದು ಹುಟ್ಟು ಹಾಕಲಾದ ವಿಜಯನಗರ ಸಾಮ್ರಾಜ್ಯ ಕೃಷ್ಣದೇವರಾಯನ ಅಳಿವಿನ ನಂತರ ಪತನದ ಹಾದಿ ಹಿಡಿದಿತ್ತು. ಇಂಥಲ್ಲಿ ಕನಕದಾಸರಂಥವರ ಕಾವ್ಯಕೃಷಿ ಹಾಗೂ ಸಾರ್ವಜನಿಕ ಜೀವನ ವ್ಯಾಸರಾಯರಿಗೆ ಬೆಂಬಲದ ಶ್ರೀರಕ್ಷೆಯಾಗಿದ್ದವು.



**ರಶ್ಮಿ ಎಂ**

**ಬಿ.ಇಡಿ ಪ್ರಶಿಕ್ಷಣಾರ್ಥಿ**

# ಛತ್ರಪತಿ ಶಿವಾಜಿ

ಭಾರತವು ಪ್ರಾಚೀನ ಕಾಲದಿಂದಲೂ ಸಾಕಷ್ಟು ಧೈರ್ಯಶಾಲಿ ಪುರುಷರ ಮತ್ತು ವೀರ ಆಡಳಿತಗಾರರ ಹಿನ್ನಲೆಯನ್ನು ಹೊಂದಿದೆ.ಭಾರತದಲ್ಲಿ ಅತ್ಯಂತ ಧೈರ್ಯಶಾಲಿ ಪುರುಷರು ಮಾತ್ರವಲ್ಲ ಕೆಲವೊಂದು ಮಹಿಳೆಯರು ಕೂಡ ಆಡಳಿತ ನಡೆಸಿದ ಇತಿಹಾಸವಿದೆ. ಈ ಧೈರ್ಯಶಾಲಿ ಸಾಮ್ರಾಜ್ಯದ ಅಧಿಪತಿಗಳುತಮ್ಮ ತಾಯಿನಾಡು ಮತ್ತು ಸ್ವರಾಜ್ಯವನ್ನು ರಕ್ಷಿಸಲು ತಮ್ಮ ಪ್ರಾಣವನ್ನೇ ತ್ಯಜಿಸಿದ್ದಾರೆ .ಅಂತಹ ಮಹಾನ್ ಧೈರ್ಯಶಾಲಿ ಯೋಧರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಕೂಡ ಒಬ್ಬರು .

ಶಿವಾಜಿಯು ಪುಣೆಯ ಬಳಿಯಲ್ಲಿರುವ ಶಿವನೇರಿ ಕೋಟೆಯಲ್ಲಿ ಫೆಬ್ರವರಿ 19–1630 ರಂದು ಜನಿಸಿದರು .ತಂದೆ ಷಹಾಜಿಭೋಂಸ್ಲೆ. ಬಿಜಾಪುರದ ಸುಲ್ತಾನ ಆದಿಲ್ ಷಾನ್ ಸೇನಾಪತಿಯಾಗಿದ್ದ. ತಾಯಿ ಜೀಜಾಬಾಯಿ ದೈವಭಕ್ತಳು, ಸ್ವತಂತ್ರ ಪ್ರೇಮಿ .ಪ್ರೇರಕ ಶಕ್ತಿಯಾಗಿದ್ದ ಅವರು ಸಮರ್ಥ ರಾಮದಾಸರು .ಈ ಎಲ್ಲರ ನೇತೃತ್ವದಲ್ಲಿ ಶಿವಾಜಿ ದೈವಭಕ್ತನಾಗಿ, ಸ್ವತಂತ್ರ ಪ್ರೇಮಿಯಾಗಿ ವೀರನಾಗಿ ರೂಪುಗೊಂಡನು .

ಹಿಂದೂ ಧರ್ಮ ರಕ್ಷಣೆ ಅವರ ಧ್ಯೇಯವಾಯಿತು .ಛತ್ರಪತಿ ಶಿವಾಜಿಯು ಅತ್ಯಂತ ಧೈರ್ಯಶಾಲಿ ಸಾಮ್ರಾಟನಾಗಿದ್ದನು ಭಾರತದಾದ್ಯಂತ ಮರಾಠ ಸಾಮ್ರಾಜ್ಯವನ್ನು ಸ್ಥಾಪಿಸಿ ವಿಸ್ತರಿಸಿದ ಕೀರ್ತಿ ಇವರದ್ದು .ವೆಚ್ಚದ ಶಿವಾಜಿ ತಮ್ಮ ಜೀವಿತಾವಧಿಯಲ್ಲಿ ತನ್ನ ಸಾಮ್ರಾಜ್ಯವನ್ನು ಮೊಗಲರಿಂದ ಕಾಪಾಡಿಕೊಳ್ಳಲು ಅನೇಕ ವರ್ಷಗಳ ಕಾಲ ಹೋರಾಡಿದನು .ಇನ್ನೂ ಕೆಲವರು ಛತ್ರಪತಿ ಶಿವಾಜಿ ದೇವರೆಂದೇ ಪರಿಗಣಿಸುತ್ತಾರೆ .

ದಕ್ಷಿಣ ಭಾರತದಲ್ಲಿ ಇಂದಿಗೂ ಕೂಡ ಪ್ರಾಚೀನ ಹಿಂದೂ ದೇವಾಲಯಗಳು ಅಳಿಯದೆ ಉಳಿದಿದೆ ಎಂದರೆ ಅದಕ್ಕೆ ಮುಖ್ಯ ಕಾರಣ ಛತ್ರಪತಿ ಶಿವಾಜಿಯ ನ್ಯಾಯಯುತ ಆಡಳಿತವಾಗಿದೆ .ಶಿವಾಜಿ ಮಹಾರಾಜರಿಗೆ 2ಗಂಡು ಮಕ್ಕಳಿದ್ದರು.ಒಂದುಮಗನ ಹೆಸರು ರಾಜಾರಾಮ್ ಇನ್ನೊರ್ವ ಮಗನ ಹೆಸರು ಸಂಭಾಜಿ. ಶಿವಾಜಿ ಮಹಾರಾಜರು ಹಿಂದೂ ಧರ್ಮಕ್ಕೆ ಸೇರಿದವರು ಹಾಗೂ ಇವರು ಧಾರ್ಮಿಕ ಸಹಿಷ್ಣುಗಳಾಗಿದ್ದರು .ಅವರ ಆಡಳಿತಾವಧಿಯಲ್ಲಿ ಹಿಂದುಗಳು ಮಾತ್ರವಲ್ಲ ಮುಸ್ಲಿಮರು ಕೂಡ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ಹೊಂದಿದ್ದರು .ಶಿವಾಜಿಯ ಸೈನ್ಯದಲ್ಲಿ ಹಿಂದೂ ಸೈನಿಕರಂತೆ ಮುಸ್ಲಿಂ ಸೈನಿಕರು ಇದ್ದರು .ಶಿವಾಜಿ ಹಿಂದೂ ಸಂಸ್ಕೃತಿಯನ್ನು ಉತ್ತೇಜಿಸುತ್ತಿದ್ದರು ಮತ್ತು ಗೌರವಿಸುತ್ತಿದ್ದರು .

ಸಮಾಜದಲ್ಲಿನ ಪ್ರತಿಯೊಬ್ಬರ ಏಳಿಗೆಗಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು .ಹಿಂದೂ ಧರ್ಮದ ರಕ್ಷಣೆಗಾಗಿ ನಿರಂತರ ಹೋರಾಟವನ್ನು ಮಾಡಿದ ದಂಡನಾಯಕ .ಅವರು ಮಹಿಳೆಯರ ಮೇಲಿನ ಯಾವುದೇ ಅಪರಾಧಕ್ಕೆ ಕಠಿಣ ಶಿಕ್ಷೆ ವಿಧಿಸುತ್ತಿದ್ದರು .ಏಪ್ರಿಲ್ 3,1680 ರಂದು ರಾಯಗಢ ಕೋಟೆಯಲ್ಲಿ ನಿಧನರಾದರು .

ತನ್ನ ಆಡಳಿತ ಅವಧಿಯಲ್ಲಿ ಅನೇಕ ಜನಪರ ಹೋರಾಟ ಹಾಗೂ ಕಾರ್ಯಕ್ರಮಗಳನ್ನು ಆಯೋಜಿಸಿ ಇಂದಿಗೂ ಜನಮಾನಸದಲ್ಲಿಅಜರಾಮರವಾಗಿ ಉಳಿದುಕೊಂಡಿದ್ದಾರೆ .ಅಂತಹ ಹುಟ್ಟು ಹೋರಾಟಗಾರರ ಜಯಂತಿ ಆಚರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ .ಹಾಗಾಗಿ ಪ್ರತಿವರ್ಷ ಫೆಬ್ರವರಿ 19 ರಂದು ಶಿವಾಜಿ ಜಯಂತಿ ಆಚರಿಸಲಾಗುತ್ತದೆ .



**ಅಕ್ಷತಾ.ಎನ್.ಬಿ.**

**ಬಿ.ಇಡಿ ಪ್ರಶಿಕ್ಷಣಾರ್ಥಿ**

## ಝಾನ್ಸಿ ರಾಣಿ ಲಕ್ಷ್ಮೀಬಾಯಿ

ಬಾಲ್ಯದಿಂದಲೇ ಹುಡುಗರ ಜತೆ ಕತ್ತಿವರಸೆ ಕುದುರೆ ಸವಾರಿ ಕಲಿತ ಲಕ್ಷ್ಮೀಬಾಯಿ 1830 ನವಂಬರ್ 19 ರಂದು ಜನಿಸಿದಳು. ತಂದೆ ಮೋರೋಪಂತ್ ಪೇಶ್ವೆ ಎರಡನೇ ಬಾಜಿರಾಯನ ಆಶ್ರಿತ, ಬಾಜೀರಾಯ ಪೇಶ್ವೆಯ ಸ್ಥಾನ ಕಳೆದುಕೊಂಡ ನಂತರ ಕಿತ್ತೂರಿಗೆ ಬಂದಾಗ ಮೋರೋಪಂತ ಮಗಳ ಜೊತೆ ಅವನನ್ನು ಹಿಂಬಾಲಿಸಿದ ಲಕ್ಷ್ಮೀಬಾಯಿ ಹುಟ್ಟಿದ ಹೆಸರು ಮಣಿಕರ್ಣಿಕಾ, ಬಾಜಿರಾಯನ ಮಕ್ಕಳ ಜೊತೆ ಯುದ್ಧ ವಿದ್ಯೆ ಕಲಿತಳು. ಝಾನ್ಸಿಯ ರಾಜ ಗಂಗಾಧರ ನಾವಲ್‌ಕರ್ ಜತೆ ಅವಳ ವಿವಾಹ ನಡೆಯಿತು. ಗಂಡನ ಮನೆಯವರು ಅವಳನ್ನು ಲಕ್ಷ್ಮೀಬಾಯಿ ಎಂದು ಕರೆದರು. ಹುಟ್ಟಿದ ಮಗು ಮರಣಿಸಿದ್ದು ಇದೇ ಚಿಂತೆಯಿಂದ ನಾ ವಾಲ್ಕರ್ ಕಾಯಿಲೆಯಿಂದ ನರಳಿ, 1956ನವೆಂಬರ್ 21 ರಂದು ಮರಣಿಸಿದ. ಆ ನಂತರ ಆಕೆ ತನ್ನ ಅಕ್ಕನ ಮಗನನ್ನು ದತ್ತು ತೆಗೆದುಕೊಂಡಳು. ಬ್ರಿಟಿಷರು ಈ ದತ್ತು ಸ್ವೀಕಾರವನ್ನು ನಿರಾಕರಿಸಿದರು.

ಬ್ರಿಟೀಷರ ವಿರುದ್ಧ ಹೋರಾಟ ನಡೆಸಲು ಸಾಧುವೊಬ್ಬ ರಾಣಿಯ ಬಳಿ ಬಂದು ಧನ ಸಹಾಯ ಕೇಳಿದ. ಆಕೆ ತನ್ನ ಸ್ವಂತ ಖಜಾನೆಯಿಂದ ಹಣ ಕೊಟ್ಟಳು ಸುದ್ದಿ ಬ್ರಿಟೀಷರಿಗೂ ತಿಳಿಯಿತು ಆಕೆ ದಂಗೆಕೋರರ ಪಡೆಗೆ ಸೇರಿದವಳೆಂದು ಬ್ರಿಟಿಷರು ಆರೋಪಿಸಿದರು. ರಾಜ್ಯಾಡಳಿತವನ್ನು ತಮಗೆ ಬಿಟ್ಟುಕೊಡಲು ಅವರು ಒತ್ತಾಯಿಸಿದರು , ರಾಣಿ ತನ್ನ ಪ್ರಜೆಗಳು ಮತ್ತು ಸಂಸ್ಥಾನಿಕರ ನೆರವಿನಿಂದ ಬ್ರಿಟಿಷರನ್ನು ಎದುರಿಸಲು ಸನ್ನದ್ಧಳಾದಳು. ಅಗತ್ಯವಾದ ಯುದ್ಧ ಸಾಮಗ್ರಿಗಳನ್ನು ಕೂಡಿ ಹಾಕಿದಳು ಸರ್ ಹೂರಾಜ್ 1858 ಮಾರ್ಚ್22 ರಂದು ಝಾನ್ಸಿಯ ಮೇಲೆ ದಾಳಿ ನಡೆಸಿದ.

ಲಕ್ಷ್ಮೀಬಾಯಿ ಅತ್ಯಂತ ದಕ್ಷತೆ, ಶಿಸ್ತು ,ಅಪ್ರತಿಮ ಶೌರ್ಯದಿಂದ ಬ್ರಿಟಿಷರ ವಿರುದ್ಧ ಹೋರಾಡಿದಳು. ಫಿರಂಗಿ ಹೊಡೆತದಿಂದ ಬಿರುಕು ಬಿಟ್ಟ ಕೋಟೆಯನ್ನು ಸರಿಪಡಿಸಲು ಹೆಂಗಸರು ಅವಿರತವಾಗಿ ಶ್ರಮಿಸಿದರು. ಲಕ್ಷ್ಮೀಬಾಯಿ ಸ್ವತಃ ಎಲ್ಲೆಡೆ ಸಂಚರಿಸಿದ ತನ್ನ ಸೈನಿಕರನ್ನು ಜನರನ್ನು ಹುರಿದುಂಬಿಸಿದಳು. ಕೋಟೆಯನ್ನು ವಶಪಡಿಸಿಕೊಳ್ಳಲು ಬ್ರಿಟೀಷರು ಹೆಣಗಾಡಬೇಕಾಯಿತು. ತಾತ್ಯಾಟೋಪೆ ಲಕ್ಷ್ಮೀಬಾಯಿಯ ಸಹಾಯಕ್ಕೆ ಬಂದ. ಈಗ ಬ್ರಿಟಿಷರು ಅವನೊಡನೆ ಹೋರಾಡುವುದು ಅನಿವಾರ್ಯವಾಯಿತು. ಕೊನೆಗೂ ಬ್ರಿಟಿಷರು ಎಲ್ಲಾ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಝಾನ್ಸಿಯನ್ನು ವಶಪಡಿಸಿಕೊಂಡರು

ಲಕ್ಷ್ಮೀಬಾಯಿ ಮತ್ತು ಅವಳ ರಕ್ಷಕರು ವೈರಿಗಳ ಕೈಗೆ ಸಿಕ್ಕದೆ ತಪ್ಪಿಸಿಕೊಂಡರು. ಕಾಲಪಿಗೆ ಹೋಗಿ ತಾತ್ಯಾ ಟೋಪಿಯನ್ನು ಸೇರಿಕೊಂಡರು ಬ್ರಿಟಿಷರು ಕಾಲ್ಪಿಯ ಮೇಲೆ ದಾಳಿಮಾಡಿ ಅದನ್ನು ತಮ್ಮ ವಶಪಡಿಸಿಕೊಂಡರು. ಬ್ರಿಟಿಷರು ಸ್ನೇಹಿತರಾಗಿದ್ದ ಸಿಂಧ್ಯಾದ ರಾಜಧಾನಿ ಗ್ವಾಲಿಯರ್ ಮೇಲೆ ಲಕ್ಷ್ಮೀಬಾಯಿ ಮತ್ತು ತಾತ್ಯಾ ಟೋಪೆ ದಾಳಿ ನಡೆಸಿದರು. ಸಿಂಧ್ಯ ಮತ್ತು ಅವನ ಪರಿವಾರದವರೂ ತಪ್ಪಿಸಿಕೊಂಡು ಓಡಿಹೋದರು ಗ್ವಾಲಿಯರ್ ಸುಲಭವಾಗಿ ಅವನ ವಶವಾಯಿತು.

ಬ್ರಿಟಿಷರು ತಮ್ಮ ಸ್ನೇಹಿತ ಸಿಂಧಿಯಾ ನಿಗೆ ಸಹಾಯಮಾಡಲು ಗ್ವಾಲಿಯರ್ ಗೆ ಮುತ್ತಿಗೆ ಹಾಕಿದರು. ಈ ಸಂದರ್ಭದಲ್ಲಿ 1858ಜೂನ್ 17ರಂದು ಬೆಳಿಗ್ಗೆ ವೈರಿಗಳ ಕಡೆಯಿಂದ ಬಂದ ಗುಂಡುಲಕ್ಷ್ಮಿಬಾಯಿಗೆ ತಗುಲಿತು. ಜಾನ್ಸಿರಾಣಿ ಲಕ್ಷ್ಮಿಬಾಯಿ ಮರಣಿಸಿದಳು. ಕೋಟೆ ಮತ್ತು ಫುಲ್ಬಾಗ್ ಗಳ ನಡುವೆ ನದಿ ತೀರದಲ್ಲಿ ಆಕೆಯ ದೇಹಕ್ಕೆ ದಹನ ಸಂಸ್ಕಾರ ನಡೆಯಿತು .



**ಮಾಲಾ.ಎಂ.**

**ಬಿ.ಇಡಿ ಪ್ರಶಿಕ್ಷಣಾರ್ಥಿ**

# ಕಿತ್ತೂರು ರಾಣಿ ಚೆನ್ನಮ್ಮ

ಕಿತ್ತೂರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿದೆ. ಆತ ತನ್ನ ರಾಜ್ಯದ ರಕ್ಷಣೆಗಾಗಿ ಇಂಗ್ಲೀಷರ ವಿರುದ್ಧ ಹೋರಾಡಿದ ಪ್ರಥಮ ಭಾರತೀಯ ಮಹಿಳೆ ಇವರು 1778 ರ ನವೆಂಬರ್ 14 ರಂದು ಭಾರತದ ಕರ್ನಾಟಕದ ಪ್ರಸ್ತುತ ಬೆಳಗಾವಿ ಜಿಲ್ಲೆಯ ಕಾಕತಿ ಎಂಬ ಸಣ್ಣ ಹಳ್ಳಿಯಲ್ಲಿ ಜನಿಸಿದರು. ಲಿಂಗಾಯತ ಸಮುದಾಯಕ್ಕೆ ಸೇರಿದ ಆಕೆ ಚಿಕ್ಕ ವಯಸ್ಸಿನಲ್ಲಿಯೇ ಕುದುರೆ ಸವಾರಿ, ಕತ್ತಿ ವರಸೆ, ಮತ್ತು ಬಿಲ್ಲುಗಾರಿಕೆಯಲ್ಲಿ ತರಬೇತಿ ಪಡೆದಿದ್ದಳು. ಇವರು 15 ನೇ ವಯಸ್ಸಿನಲ್ಲಿ ದೇಸಾಯಿ ಮನೆತನದ ರಾಜ ಮಲ್ಲಸರ್ಜನನ್ನು ವಿವಾಹವಾದರು. ಕಿತ್ತೂರು ಚೆನ್ನಮ್ಮ 1772 ರಿಂದ 1816 ರವರೆಗೆ ರಾಜ್ಯವನ್ನಾಳಿದ ಮಲ್ಲಸರ್ಜ ದೇಸಾಯಿ ಕಿತ್ತೂರಿನ ಅರಸರಲ್ಲಿ ಪ್ರಮುಖನಾದವನು. ಮಲ್ಲಸರ್ಜ ದೊರೆಗೆ ರುದ್ರವ್ವ ಮತ್ತು ಚೆನ್ನಮ್ಮ ಇಬ್ಬರು ಹೆಂಡತಿಯರು, ಚೆನ್ನಮ್ಮ ಕಾಕತಿ ದೇಸಾಯರ ಮಗಳು ಚೆಲುವೆ ಯುದ್ಧಕಲೆಯಲ್ಲಿ ಪ್ರವೀಣಳು, ಚೆನ್ನಮ್ಮನಿಗೆ ಮಕ್ಕಳಿರಲಿಲ್ಲ. ಮಲ್ಲಸರ್ಜನ ಮರಣಾಂತರ ರುದ್ರವಯ್ಯಾ ಹಿರಿಯ ಮಗ ಶಿವಲಿಂಗ ರುದ್ರಸರ್ಜ ಪಟ್ಟಕ್ಕೆ ಬಂದ. ಮಕ್ಕಳಿಲ್ಲದ ರುದ್ರಸರ್ಜ ಅನಾರೋಗ್ಯದಿಂದ 1824 ರಲ್ಲಿ ಮರಣಿಸಿದ ಇದಕ್ಕೆ ಮೊದಲು ಮಾಸ್ತಮರಡಿ ಬಾಳಪ್ಪ ಗೌಡರ ಮಗ ಶಿವಲಿಂಗ ಎಂಬ ಬಾಲಕನನ್ನು ದತ್ತು ತೆಗೆದುಕೊಂಡಿದ್ದ.

ಬ್ರಿಟೀಷರು ಕಿತ್ತೂರು ಸಂಸ್ಥಾನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಸನ್ನಾಹ ನಡೆಸಿದರು. ದತ್ತಕವನ್ನು ಒಪ್ಪಲು ಬ್ರಿಟೀಷರು ನಿರಾಕರಿಸಿದರು. ಇದರಿಂದ ಕುಪಿತಗೊಂಡ ಚೆನ್ನಮ್ಮ ಬ್ರಿಟೀಷರ ವಿರುದ್ಧ ಹೋರಾಡಲು ಸಿದ್ಧತೆ ನಡೆಸಿದಳು. ಅರಮನೆಯ ಕಾರುಬಾರೇ ಕಡೆಗಿದ್ದ ಮಲ್ಲಪ್ಪಶೆಟ್ಟಿ ವೆಂಕಟರಾಯ ಎಂಬ ದೇಶದ್ರೋಹಿಗಳಿಂದ ಈ ಸುದ್ದಿ ಧಾರವಾಡದ ಕಲೆಕ್ಟರ್ ಥ್ಯಾಕರೆಗೆ ತಿಳಿಯಿತು. 1824 ಅಕ್ಟೋಬರ್ 21 ರಂದು ಥ್ಯಾಕರೆ ಹಠಾತ್ತಾಗಿ ಕಿತ್ತೂರಿನ ಕೋಟೆಯ ಮೇಲೆ ಎರಗಿದ. ದಿನಾಂಕ 23ರಂದು ಕೋಟೆಯ ಹೆಬ್ಬಾಗಿಲನ್ನು ಒಡೆಯಲು ಥ್ಯಾಕರೆ ಕ್ಯಾಪ್ಟನ್ ಬ್ಲಾಕ್ ಗೆ ಆಜ್ಞೆ ಮಾಡಿದನು. ಅಷ್ಟರಲ್ಲಿ ಕಿತ್ತೂರಿನ ಯೋಧ ಮಾಟೂರು ಬಾಳಪ್ಪ ಥ್ಯಾಕರೆಯನ್ನು ಗುಂಡಿಕ್ಕಿ ಕೊಂದ ಬ್ಲಾಕ್ ಮತ್ತಿತರ ಅಧಿಕಾರಿಗಳು ಹೋರಾಟದಲ್ಲಿ ಸತ್ತರು. ನೂರಾರು ಬ್ರಿಟೀಷ್ ಸೈನಿಕರು ಸೆರೆಸಿಕ್ಕರು. ಚೆನ್ನಮ್ಮ ಈ ಸೆರೆಯಾಳುಗಳು ಬಗ್ಗೆ ಉದಾರವಾಗಿ ನಡೆದುಕೊಂಡಳು.

ಮೈಸೂರು, ಮದರಸು, ಮುಂಬಯಿ, ಸೊಲ್ಲಾಪುರ ಇನ್ನಿತರ ಕಡೆಗಳಿಂದ ಬಂದ ಬ್ರಿಟೀಷ್ ಸೈನ್ಯ ಕಿತ್ತೂರಿನ ಮೇಲೆ ದಾಳಿ ಮಾಡಿತ್ತು. ದತ್ತು ಪುತ್ರನನ್ನು ಮಾನ್ಯ ಮಾಡುವುದಾಗಿ ಚಾಪ್ಲಿನ್ ವಚನ ಕೊಟ್ಟಾಗ ಚೆನ್ನಮ್ಮ ಕೈದಿಗಳನ್ನು ಬಿಡುಗಡೆ ಮಾಡಿದಳು. ಆದರೆ ಮಾತಿಗೆ ತಪ್ಪಿದ ಚಾಪ್ಲಿನ್ ಕೋಟೆಯನ್ನು ಮುತ್ತಲು ಆಜ್ಞೆ ಮಾಡಿದನು. ಇದರಿಂದ ಕೇಂದ್ರಿತಳಾದ ಚೆನ್ನಮ್ಮ ಸ್ವತಃ ತನ್ನ ವೀರರೊಂದಿಗೆ ಕಾಳಗಕ್ಕೆ ಮುಂದಾದಳು ಬ್ರಿಟೀಷರ ಸುಸಜ್ಜಿತ ಆಯುಧಗಳಿದ್ದರೂ ಕಿತ್ತೂರು ಪಕ್ಷಕ್ಕೆ ಸೋಲುಂಟಾಯಿತು.

ಚೆನ್ನಮ್ಮ ಮತ್ತು ಸೊಸೆ ವೀರವ್ವನ್ನು ಬಂಧಿಸಿ ಬೈಲಹೊಂಗಲದ ಸೆರೆಯಲ್ಲಿರಿಸಲಾಯಿತು. ಚಿಕ್ಕಮ್ಮ ಮತ್ತೆ ರಾಜ್ಯ ಪಡೆಯುವ ಆಸೆ ಹೊತ್ತು ಸಂಗೊಳ್ಳಿ ರಾಯಣ್ಣನಂಥ ವೀರಯೋಧರ ಗುಪ್ತ ಸಂಪರ್ಕ ಪಡೆದಳು. ಕಿತ್ತೂರಿನ ಬಿಡುಗಡೆಗಾಗಿ ಪ್ರಯತ್ನ ನಡೆಸಲು ತನ್ನ ಒಡವೆಗಳನ್ನು ಹಣವನ್ನು ಕಳಿಸುತ್ತಾ ಅವರನ್ನು ಹುರಿದುಂಬಿಸಿದಳು. ಕೊನೆಗೆ ರಾಣಿ ಚೆನ್ನಮ್ಮ ತನ್ನ 57 ನೇ ವಯಸ್ಸಿನಲ್ಲಿ 1829 ಫೆಬ್ರವರಿ 2 ರಂದು ಕೊನೆಯುಸಿರೆಳದಳು. ಸಕಲಸೇನೆ ಮರ್ಯಾದೆಗಳೊಂದಿಗೆ ಆಕೆಯ ಅಂತ್ಯಕ್ರಿಯೆ ಬೈಲಹೊಂಗಲದ ಕಟ್ಟಡದಲ್ಲಿ ನಡೆಯಿತು.



**ಮಾಲಾ.ಎಂ.**

**ಬಿ.ಇಡಿ ಪ್ರಶಿಕ್ಷಣಾರ್ಥಿ**

# ಸ್ವಾಮಿ ವಿವೇಕಾನಂದ

“ಏಳಿರಿ! ಎದ್ದೇಳಿರಿ! ಗುರಿ ಮುಟ್ಟುವ ತನಕ ನಿಲ್ಲದಿರಿ” ತಾಯ್ನಾಡಿನ ಹಿರಿಮೆಯನ್ನು ಪಶ್ಚಿಮ ದೇಶಗಳಿಗೆ ತೋರಿಸಿಕೊಟ್ಟ ಸ್ವಾಮಿ ವಿವೇಕಾನಂದರು ಭಾರತೀಯರಿಗೆ ನೀಡಿದ ಕರೆ ಇದು. ಸಂಡಿಜಚಿ ವಿವೇಕಾನಂದರು ಭಾರತದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಅವರು ಪರಿಣಿರಾಗಿದ್ದಾರೆ. ಇವರು ಜನ್ಮವಾದ ಜನೆವರಿ 12 ರಂದು ರಾಷ್ಟ್ರೀಯ “ಯುವದಿನ” ವೆಂದು ಆಚರಿಸಲಾಗುತ್ತದೆ.

ಸ್ವಾಮಿ ವಿವೇಕಾನಂದರು ಭಾರತದಲ್ಲಿ ಜನಿಸಿದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರು ವಿವೇಕಾನಂದರು ಜನವರಿ 12, 1893 ರಂದು ಕಲ್ಕತ್ತಾದಲ್ಲಿ ಜನಿಸಿದರು. ಇವರು ಬಾಲ್ಯದ ಹೆಸರು ನರೇಂದ್ರನಾಥ ದತ್ತ. ತಂದೆ ವಿಶ್ವನಾಥ ತಾಯಿ ಭುವನೇಶ್ವರಿ ದೇವಿ. ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ ವಿವೇಕಾನಂದ ಎಂಬ ಹೆಸರನ್ನು ಪಡೆದರು. ಸ್ವಾಮಿ ವಿವೇಕಾನಂದರು ಸತ್ಯ ವಾಗ್ಮಿ, ಉತ್ತಮ ವಿದ್ವಾಂಸ ಹಾಗೂ ಕ್ರೀಡಾಪಟು. ಬಾಲ್ಯದಿಂದಲೂ ಧಾರ್ಮಿಕ ಸ್ವಭಾವದವರಾಗಿ ಧರ್ಮ ಮತ್ತು ದೇವರ ಪ್ರಾಪ್ತಿಯ ಬಗ್ಗೆ ಚಿಂತಿತರಾಗಿದ್ದರು. ಭೂಮಿಯ ಮೇಲೆ ತಾವು ಬದುಕಿದ್ದ ಅಲ್ಪಾವಧಿಯಲ್ಲಿಯೇ ವಿವೇಕಾನಂದರು ಭಾರತವನ್ನು ಜಗತ್ತಿಗೆ ಪರಿಚಯ ಮಾಡಿಕೊಡುವುದರಲ್ಲಿ ಮತ್ತು ಭಾರತೀಯರಿಗೆ ತಮ್ಮ ಸಂಸ್ಕೃತಿಯ ಪರಂಪರೆಯನ್ನು ಹಾಗೂ ಕರ್ತವ್ಯವನ್ನು ತಿಳಿಸಿಕೊಡುವಲ್ಲಿ ಯಶಸ್ವಿಯಾದರು.

ಅಮೇರಿಕಾ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸನಾತನ ಹಿಂದೂ ಧರ್ಮದ ಸಂದೇಶವನ್ನು ಪ್ರಪಂಚಕ್ಕೆ ಸಾರಿದರು. ಈ ಸಮ್ಮೇಳನದಲ್ಲಿ ಅವರು ಮಾಡಿದ ಭಾಷಣ ಪಶ್ಚಿಮ ದೇಶದವರ ಕಣ್ಣೂ ತೆರೆಸಿತು. ಅದುವರೆಗೂ ಅವರು ಭಾರತವನ್ನು ಮೂಢನಂಬಿಕೆಗಳ ಮತ್ತು ಅನಾಗರಿಕ ದೇಶ ಎಂದು ತಿಳಿದಿದ್ದರು. ವಿವೇಕಾನಂದರ ಭಾಷಣ ಹಿಂಧೂ ಧರ್ಮದ ಹಿರಿಮೆಯನ್ನು ಭಾರತದ ಸಂಸ್ಕೃತಿಯನ್ನು ಅವರಿಗೆ ಪರಿಚಯಿಸಿತ್ತು. ನಂತರ 1897 ಜನವರಿ 15 ರಂದು ಭಾರತಕ್ಕೆ ಹಿಂದುರಿಗಿದ ಅವರು ತಮ್ಮ ಸಂದೇಶವನ್ನು ಭಾರತದಲ್ಲಿ ಹರಡಿಸಿದರು.

ನಾವು ನಮ್ಮ ಕಾಲ ಮೇಲೆ ನಿಂತು ಮನುಷ್ಯರಾಗೋಣ. ನಮಗಿಂದು ಪುರುಷ ಸಿಂಹರನ್ನಾಗಿ ನಿರ್ಮಿಸುವ ಧೈರ್ಯಗಳನ್ನಾಗಿ ಸಿದ್ಧಾಂತ ಬೇಕು. ಮತ್ತು ಸರ್ವತೋಮುಖಗಳನ್ನಾಗಿ ಮಾಡುವ ಒಳ್ಳೆಯ ವಿದ್ಯಾಭ್ಯಾಸ ಬೇಕು, ದೈಹಿಕವಾಗಿ, ಮಾನಸಿಕವಾಗಿ, ಆಧ್ಯಾತ್ಮಿಕವಾಗಿ ಯಾವುದು ದುರ್ಬರನ್ನಾಗಿ ಮಾಡುವುದೋ ಅದನ್ನು ವಿಷದಂತೆ ತ್ಯಜಿಸಬೇಕು. ನಾವು ದೇವರ ಮಕ್ಕಳು ನಮ್ಮಲ್ಲಿ ನಮಗೆ ನಂಬಿಕೆಯಿರಬೇಕು. ಹೀಗೆ ವಿವೇಕಾನಂದರು ಭಾರತೀಯರನ್ನು ಎಚ್ಚರಿಸಿದರು. ಅವರಲ್ಲಿ ಹೊಸ ಹುರುಪನ್ನು ತುಂಬಿಸುತ್ತಿದ್ದರು.

ಸ್ವಾಮಿ ವಿವೇಕಾನಂದರು ತತ್ವಜ್ಞಾನಿಗಳು, ದೈವಭಕ್ತರು, ಕರ್ಮಯೋಗಿಗಳು, ಸಮಾಜಸುಧಾರಕರು ಮತ್ತು ದೇಶಭಕ್ತರು. ಭಾರತೀಯರಲ್ಲಿಯ ಲೋಪದೋಷಗಳನ್ನು ತೋರಿಸಿ ಪರಿಹಾರಗಳನ್ನು ಹೇಳುತ್ತಿದ್ದರು. ಸಹಕಾರ ಮನೋಭಾವ ಅಭಾವ, ಅಸೂಯೆ, ಸೋಮಾರಿತನ, ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಗಮನ ಹರಿಸುತ್ತಿದ್ದರು. ಜಾತಿಭೇದ, ಪ್ರಾದೇಶಿಕತೆ, ಅಂಧಾಭಿಮಾನ ಇವುಗಳನ್ನೆಲ್ಲಾ ಖಂಡಿಸುತ್ತಿದ್ದರು. ವಿವೇಕಾನಂದರ ಬೋಧನೆಗಳು ಹೆಚ್ಚಾಗಿ ರಾಮಕೃಷ್ಣರ ದೈವಿಕ ಅಭಿವ್ಯಕ್ತಿಗಳ ಆಧ್ಯಾತ್ಮಿಕ

ಬೋಧನೆಗಳು ಮತ್ತು ಅದ್ವೈತ ವೇದಾಂತ ತತ್ವಶಾಸ್ತ್ರದ ವೈಯಕ್ತಿಕ ಆಂತರಿಕತೆಯನ್ನು ಆಧರಿಸಿದೆ. ಅವರ ಪ್ರಕಾರ ಜೀವನದ ಅಂತಿಮ ಗುರಿ ಆತ್ಮದ ಸ್ವಾತಂತ್ರ್ಯವನ್ನು ಸಾಧಿಸುವುದು ಮತ್ತು ಅದು ಒಬ್ಬರ ಧರ್ಮದ ಸಂಪೂರ್ಣತೆಯನ್ನು ಒಳಗೊಂಡಿದೆ.

ವಿವೇಕಾನಂದರ ಬೋಧನೆಗಳು ಯುವಕರನ್ನು ಮಾತ್ರವಲ್ಲ ಇಡೀ ಜಗತ್ತನ್ನು ಪ್ರೇರೇಪಿಸಿತ್ತು. ಅವರ ಉಪನ್ಯಾಸಗಳು, ಬರಹಗಳು, ಪತ್ರಗಳು, ಕವಿತೆಗಳು, ವಿಚಾರಗಳು ಇಡೀ ವಿಶ್ವಕ್ಕೆ ಪ್ರೇರೇಪಣೆಯಯಿತು. ಹೀಗೆ ವಿವೇಕಾನಂದರು 1 ರಾಷ್ಟ್ರವಾಗಿ ಭಾರತದ ಏಕತೆಗೆ ನಿಜವಾದ ಅಡಿಪಾಯ ಹಾಕಿದರು. ಹೀಗೆ ಭೂಮಿಯ ಮೇಲೆ ತಾವು ಬದುಕಿದ್ದ ಅಲ್ಪಾವಧಿಯಲ್ಲಿಯೇ ವಿವೇಕಾನಂದರು ಭಾರತವನ್ನು ಮತ್ತು ಇಲ್ಲಿಯ ಸಂಸ್ಕೃತಿಯನ್ನು ಇಡೀ ಜಗತ್ತಿಗೆ ಪರಿಚಯ ಮಾಡಿಕೊಟ್ಟರು. ನಂತರ 1920 ಜುಲೈ 4 ರಂದು ಧ್ಯಾನಮಗ್ನರಾಗಿ ಇರುವಾಗಲೇ ಮರಣ ಹೊಂದಿದರು.

ಸ್ವಾಮಿ ವಿವೇಕಾನಂದರು ಅಸಾಧಾರಣ ಪ್ರಜ್ಞೆ ಮತ್ತು ಅವರ ದೂರದೃಷ್ಟಿ ಎಷ್ಟೋ ಸಾಧ್ಯತೆಗಳನ್ನು ಸಾಧ್ಯಗೊಳಿಸಿವೆ. ಹೀಗಾಗಿ ನಾವೆಲ್ಲರೂ ಅವರ ಚಿಂತನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಕಾರ್ಯವನ್ನು ಮಾಡೋಣ.



**ಮೇಘನಾ ವಿ**

**ಬಿ.ಇಡಿ ಪ್ರಶಿಕ್ಷಣಾರ್ಥಿ**

# ಸ್ವಾಮಿ ವಿವೇಕಾನಂದರ ಚಿಕಾಗೋ ಸಮ್ಮೇಳನದ ಮಾತು

ಮಾನವ ಇತಿಹಾಸದಲ್ಲಿ ತಮ್ಮ ಶ್ರೇಷ್ಠ ಬದುಕು ಹಾಗು ಸಂದೇಶಗಳ ಮೂಲಕ ಜನಮಾನಸದಲ್ಲಿ ಅಚ್ಚಳಿಯದೆ ಉಳಿದ ಮಾಹಾನುಭಾವರು ಸ್ಫೂರ್ತಿಯ ಸೆಲೆ ಎಂದೆನಿಸಿದ್ಧವರು ಸ್ವಾಮಿ ವಿವೇಕಾನಂದರು.ಅವರ ನಡೆನುಡಿ ಅಚಾರ–ವಿಚಾರಗಳು ಮಾನವ ಸಂಕುಲಕ್ಕೆ 'ಶಿಲಾಕ್ಷರ'ದಂತೆ ದಿಕ್ಸೂಚಿಯಾಗಿದದ್ದೆ ಸತ್ಯ ಸ್ವಾಮಿ ವಿವೇಕಾನಂದರು ಎಂಬ ಮಹಾಮಾನವನ ಸಂಕುಲಕ್ಕೆ ಜಗತ್ತಿನ ಮೇಲೆ ಬೀರಿದ ಪ್ರಭಾವ ಅಗಾದ ಮತ್ತು ಅಸಮಾನ್ಯ ಎಂದೆ ಬೊಬ್ಬೆ ಹೋಡಿಯುತ್ತಿದ್ದ ಸಂಕುಚಿತ ಮನಸ್ಸುಗಳಿಗೆ ಸಮಯೋಚಿತ ಚಿಕಿತ್ಸೆಯಿತ್ತು. ಕಂದಕವನ್ನು ಬಹುತೇಕ ನಿಶ್ಯೇಷಗೊಲಿಸಿ ಅಖಂಡ ವಿಶ್ವದ ಪರಿಕಲ್ಪನೆಯಲ್ಲಿ ಜಗತ್ತು ಉಳದು ತನ್ನ ಬಾಳುವೆಯನ್ನು ದೃಡವಾಗಿ ವಿಶ್ವಾಸದಿಂದ ಬೇಸರ, ಭಯವಿಲ್ಲದ ದಿಟ್ಟತನದಿಂದ ಮುನ್ನಡೆಯಲು ಅನುವು ಮಾಡಿಕೊಟ್ಟ ವಿಶ್ವಮಾನವ ಅವರಾಗಿದ್ದರು. ಅವರು ಚಿಕಾಗೋ ಭಾಷಣದ 125ನೇ ವರ್ಷದ ಸಂಭ್ರಮದ ಹಿನ್ನಲೆಯಲ್ಲಿ ಅವರ ಪ್ರಭಾವಗಳ ಹಲವಾರು ನಿದರ್ಶನಗಳನ್ನು ನಾವು ಎಂದಿಗ್ಯೂ ನೆನಪಿನಲ್ಲಿಟ್ಟಿಕೊಳ್ಳಬೇಕು.

ಅಮೇರಿಕಾದ 200ನೇ ವರ್ಷದ ಸ್ವಾತಂತ್ರ್ಯೋತ್ಸವ ಅಂಗವಾಗಿ ಅಮೇರಿಕಾದ ವಾಷಿಂಗ್‌ಟನ್ ಸ್ಮಿತ್‌ಸೋನಿಯನ್ ಇನ್ಸಿಟ್ಯೂಟ್‌ನಲ್ಲಿ ಏರ್ಪಡಿಸಲಾಗಿದ್ಧ ಜಾಗತೀಕ ಸಮ್ಮೇಳನ ಮತ್ತು ವಸ್ತು ಪ್ರದರ್ಶನದಲ್ಲಿ ಅಮೇರಿಕಾದ ಪರಂಪರೆ, ಸಂಸ್ಕ್ರತಿ ಇತಿಹಾಸದ ಮೇಲೆ ಅಗಾದ ಹಾಗೂ ಅಚ್ಚಳಿಯದ ಪ್ರಭಾವ ಬೀರುವ 31 ವಿಶ್ವವಿಖ್ಯಾತರ ಪಟ್ಟಿಯಲ್ಲಿ ಸ್ವಾಮಿ ವಿವೇಕಾನಂದರು ಗುರುತರ ಸ್ಥಾನದಲ್ಲಿದು ್ದ1993ನಲ್ಲಿ ಚಿಕಾಗೋನಲ್ಲಿ ನೆರವೇರಿದ ವಶ್ವಧರ್ಮ ಸಮ್ಮೇಳನದ ಶತಮಾನೋತ್ಸವ ಆಚರಣೆಯನ್ನು ಯುನೆಸ್ಕೋದಲ್ಲಿ ನೇರವೆರಿಸಲಾಯಿತು.

ಸ್ವಾಮಿ ವಿವೇಕಾನಂದರು ತಮ್ಮ ಭಾಷಣವನ್ನು ಆರಂಭಿಸಿ ನನ್ನ ಸೋದರ, ಸೋದರಿಯರೇ ಎನ್ನುತ್ತಾ ಅವರು ಜಗತ್ತಿನ ಅತ್ಯಂತ ಪುರಾತನ ನಂತರ ಸಮುದಾಯದ ಪರವಾಗಿ ಹೇಳುತ್ತೇನೆ. ಹಾಗೂ ಲಕ್ಷಾಂತರ ಹಿಂದೂ ಜನತೆಯ ಪರವಾಗಿ ನಾನು ನಿಮಗೆ ಧನ್ಯವಾದ ಅಥವಾ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಕೇವಲ ಸಮನ್ವಯವೊಂದೇ ಅಲ್ಲ. ಸ್ವಿಕಾರದ ಪಾಠವನ್ನು ವಿಶ್ವಕ್ಕೆ ಸಾರಿದ ಧರ್ಮಕ್ಕೆ ನಾನು ಸೇರಿದವನು ಎಂಬುದು ನನ್ನ ಪಾಲಿನ ಅಭಿಮಾನ. ಎಲ್ಲಾ ಧರ್ಮಗಳೂ ನಿಜವೆಂದು ನಾನು ಸ್ವಿಕರಿಸುತ್ತೇನೆ. ಭೊಮಿಯ ಮೇಲಿನ ಎಲ್ಲ ದೇಶಗಳ ಪೀಡಿತರು ಹಾಗು ಅನಾಥರಿಗೆ ಆಶ್ರಯ ನೀಡಿದ ದಿಗ್ವಿಜಯ ಹಾಗೂ ಇತರ ಧರ್ಮಗಳ ನಾಶದಿಂದ ಉಂಟಾಗುತ್ತದೆ ಎಂದು ಭಾವಿಸುವವರಿಗೆ ನನ್ನ ಕಿವಿಮಾತು ಸೋದರರೆ ನಿಮ್ಮದು ಅಸಂಭವನೀಯ ನಂಬಿಕೆ. ಹಿಂದೂ ಅಥವಾ ಬೌದ್ದನೊಬ್ಬ ಕ್ರೈಸ್ತನಾಗಬೇಕು ಎದು ಬಯಸತಿ ಹಾಗೆ ಮಾಡಿದರೆ ದೇವರು ನನ್ನನ್ನು ತಡೆಯಲಿ ಎಲ್ಲ ಧರ್ಮಗಳ ಘೋಷಣೆಗಳಲ್ಲಿ ಶೀಘ್ರವೇ

ಇವುಗಳನ್ನು ಕಾಣುವ ಕಾಲ ಬರಲಿದೆ. ಕಚ್ಚಾಡ ಬೇಡಿ ನೇರವಾಗಿ ಜೀರ್ಣಸಿಕೊಳ್ಳಿ ಹಾಳುಗೆದಬೇಡಿ ಸಾಮರಸ್ಯ ಮತ್ತು ಶಾಂತಿಯು ಹೊರತು ಅಂತಕಲಹ ಬೇಡ ಎಂದು ನೆರದಿದ್ದ ಸಮೇಳದಲ್ಲಿ ಸ್ವಾಮಿ ವಿವೇಕಾನಂದರು ಹೇಳುತ್ತಾರೆ.



**ರಶ್ಮಿ ಎಮ್**

**ಬಿ.ಇಡಿ ಪ್ರಶಿಕ್ಷಣಾರ್ಥಿ**

## ದಾದಾ ಭಾಯಿ ನವರೋಜಿ

ದಾದಾಭಾಯಿ ನವರೋಜಿಯವರು ಬಾಂಬೆಯ ಪ್ರಮುಖ ಪಾರ್ಸಿ ಕುಟುಂಬದಲ್ಲಿ ಜನಿಸಿದರು. ಎಲ್ಫಿನ್ ಸ್ಟೋನ್ ಕಾಲೇಜಿನಲ್ಲಿ ಅತ್ಯುತ್ತಮ ವೃತ್ತಿಜೀವನ ನಂತರ ನವರೋಜಿ ಎಲ್ಫನ್ ಸ್ಟೋನ್‌ನಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿ ಸಂಕ್ಷಿಪ್ತವಾಗಿ ಸೇವೆ ಸಲಿಸಿದರು. 1855ರಲ್ಲಿ ನವರೋಜಿ ಲಂಡನ್ನ ಪ್ರಮುಖ ಪಾರ್ಸಿ ವಾಣಿಜ್ಯ ಸಂಸ್ಥೆಯಲ್ಲಿ ಪಾಲುದಾರರಾದರು ಮತ್ತು 1862ರಲ್ಲಿ ಅವರು ತಮ್ಮ ಸ್ವಂತ ವಾಣಿಜ್ಯ ಮನೆಯನ್ನು ಸ್ಥಾಪಿಸಿದರು.ಅದೇ ಕಲಿತ ಅವರು ಭಾರತೀಯ ವ್ಯವಹಾರಗಳ ಬಗ್ಗೆ ಇಂಗ್ಲೀಷ್ ಸಾರ್ವಜನಿಕರಿಗೆ ಶಿಕ್ಷಣ ನೀಡಲು ಪ್ರಭಾವಿ ಈಸ್ಟ್ ಇಂಡಿಯನ್ ಅಸೋಸಿಯೇಷನ್ ಅನ್ನು ಸ್ಥಾಪಿಸಿದರು.

1873ರಲ್ಲಿ ನೌರೋಜಿ ಭಾರತದ ಪ್ರಮುಖ ರಾಜ ಪ್ರಭುತ್ವದ ರಾಜ್ಯವಾದ ಬರೋಡಾದ ದುವಾನ್ ಅಥವಾ ಮುಖ್ಯಮಂತ್ರಿಯ ಕಷ್ಟಕರವಾದ ಹುದ್ದೆಯನ್ನು ಒಪ್ಪಿಕೊಂಡರು ಆದರೆ ಬಾಂಬೆ ಮುನ್ಸಿಪಲ್ ಕಾರ್ಪೋರೇಶನ್‌ನಲ್ಲಿ ಚುನಾಯಿತ ಸ್ಥಾನಕ್ಕಾಗಿ ತಕ್ಕಮಟ್ಟಿಗೆ ತಕ್ಷಣವೇ ಅದನ್ನು ತೊರೆದರು.

ನವರೋಜಿ ದಾದಾಭಾಯ್ 1825–1917 ಮುಂಬೈನ ಪಾರ್ಸಿ ರಾಜಕಾರಣಿ ಭಾರತದ ಗ್ರ್ಯಾಂಡ್ ಓಲ್ಡ್ ಮ್ಯಾನ್ ದಾದಾಭಾಯಿ ನವರೋಜಿ 1845ರಲ್ಲಿ ಎಲ್ಫನ್ ಸ್ಟೋನ್ ಕಾಲೇಜ್ ಮುಂಬೈನಿಂದ ಪದವಿ ಪಡೆದರು. ಮತ್ತು 1854ರಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾದರು.1901ರಲ್ಲಿ ಅವರು ತಮ್ಮ ಅತ್ಯಂತ ಪ್ರಸಿದ್ಧ ಪುಸ್ತಕವಾದ ಪಾವರ್ಟಿ ಅಂಡ್ ಅನ್ ಬ್ರಿಟಿಶ್ ರೂಲ್ ಇನ್ ಇಂಡಿಯಾವನ್ನು ಲಂಡನ್ನಲ್ಲಿ ಪ್ರಕಟಿಸಿದರು.ಬ್ರಿಟಿಷರನುನ ಅವರ ಸ್ವಂತ ಉದಾರವಾದಿ ಪಟ್ಟಿಗಳ ಪ್ರಕಾರ ಮೌಲ್ಯ ಮಾಪನ ಮಾಡುತ್ತಾ,ಅವರು ತಮ್ಮ ವಸಾಹತುಶಹಿ ಆಳ್ವಿಕೆಯನ್ನು ಅನ್ ಬ್ರಿಟಿಷ್ ಎಂದು.ಕಂಡುಕೊಂಡರು.

ಭಾರತದ ಹೆಚ್ಚುತ್ತಿರುವ ಬಡತನಕ್ಕೆ ಅವರನ್ನು ದೂಷಿಸಿದರು ಮತ್ತು ಬೆಇಟನ್ನು ಭಾರತದ ಸಂಪತ್ತಿನ ಡ್ರೈನ್ ಸಿದ್ಧಾಂತವನ್ನು ಪರಿಶೀಲಿಸಿದಾಗ.ದೀರ್ಘಾವಧಿಯಲ್ಲಿ, ವ್ಯಾಪಾರದಿಂದ ಲಾಭದಾಯಕ ಲಾಭಗಳು ಬ್ರಿಟಿಷರಿಗೆ ಸೇರಿದೆ ಎಂದು ಅವರು ಕಕಂಡುಕೊಂಡರು.ಆದರೆ ಭಾರತವು ಸಾಕಷ್ಟು ಆದಾಯವನ್ನು ಪಡೆಯಲಿಲ್ಲಿ. ಅವರ ಕೊಡುಗೆಯಾಗಿದೆ.

ಇದು ಕಾಲಾನಂತರದಲ್ಲಿ ಹೆಚ್ಚು ಅನುಯಾಯಿಗಳನ್ನುಗಳಿಸಿತು.ನವರೋಜಿಯವರು ರಾಷ್ಟ್ರೀಯ ಕಾಂಗ್ರೆಸ್ನ ಎರಡು ಹಿಂದಿನ ಅಧಿವೇಶನಗಳ ಅಧ್ಯಕ್ಷತೆವಹಿಸಿದ್ದರು ಆದರೆ ಅವರ ಪ್ರಮುಖ ಅಧ್ಯಕ್ಷತೆಯು 1906 ರಲ್ಲಿ ಕೋಲ್ಕತ್ತಾ (ಕಲ್ಕತ್ತಾ) ಕಾಂಗ್ರೆಸ್ನಲ್ಲಿ ಮೊದಲು ಸ್ವರಾಜ್(ಸ್ವರಾಜ್ಯ)ಗೆ ಕರೆನೀಡಿದಾಗ.1905ರಲ್ಲಿ ಬಂಗಾಳದ ವಿಭಜನೆಯು ಭಾರತದಲ್ಲಿ ಕ್ರಾಂತಿಕಾರಿ ಮೂಲಭೂತವಾದನ್ನು ಉತ್ತೇಜಿಸಿತು. ಆದರೆ 1906ರಲ್ಲಿ ಲಿಬರಲ್ ಪಕ್ಷವು ಗ್ರೇಟ್ ಬ್ರಿಟನ್‌ನಲ್ಲಿ ರಾಷ್ಟ್ರೀಯ ಚುನಾವಣೆಗಳನ್ನು ಗೆದ್ದಿತು ಮತ್ತು ಕಾಂಗ್ರೆಸ್ನ ಮಧ್ಯಮ ವಿಭಗವು ಭಾರತದಲ್ಲಿ ಪ್ರಮುಖ ಸಾಂವಿಧಾನಿಕ ಸುಧಾರಣೆಗೆ ಆಸಿಸಿತು.

ಭಾರತದ ಶಂಪತ್ತು ಹಾಗೂ ಮಾನವ ಸಂಪನ್ಮೂಲವನ್ನು ಬ್ರಿಟಿಷರು ಹಾಗೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.ಎಂಬುದನ್ನು ವಿವರಿಸಿದವರಲ್ಲಿ ಅವರೇ ಮೊದಲಿಗರು,ಅಂಕಿ–ಅಂಶಗಳೊಂದಿಗೆ ವಿವರಿಸಿದ.ಭಾರತದಲ್ಲಿ ಬಡತನ ಮತ್ತು ಅನ್ ಬ್ರಿಡಿಷ್ ರೂಲ್ ಎಂಬ ನಾರೋಜಿ ಪುಸ್ತಕವನು ವಸಾಹತುಶಹಿ ಭಾರತದ ಮೊದಲ ಪುಸ್ತಕವೆಂದು ಪ್ರಜ್ಞರು ಪರಿಗಣೀಸುತ್ತಾರೆ.

ಭಾರತಕ್ಕೆ ಸ್ವರಾಜ್ ಎಂದು ಸಾರ್ವಜನಿಕವಾಗಿ ಅವರು ಕಾಂಗ್ರೆಸ್ ವೇದಿಕೆಯಿಂದಲೇ ಒತ್ತಾಯಿಸಿದರು. ಅವರು ಬಾಂಬೆಯಲ್ಲಿ ತಮ್ಮ 91ನೇ ವಯಸ್ಸಿನಲ್ಲಿ 30 ಜೂನ್ 1917ರಂದು ನಿಧನರಾದರು.



**ಅರ್ಪಿತ ಟಿ.ಕೆ.**

ಬಿ.ಇಡಿ ಪ್ರಶಿಕ್ಷಣಾರ್ಥಿ

# ಚಂದ್ರಶೇಖರ್ ಆಜಾದ್.

ದುಷ್ಮನೋಂಕಿ ಗೋಲಿಯೋ ಕಾ ಹಮ್ ಸಾಮ್ನಾ ಕರೇಂಗೆ.ಆಜಾದ್ ಹೀ ರಹೇ ಹೆ ಹಮ್ ಆಜಾದ್ ಹೀ ರಹೇಂಗೆ ಎಂದು ಬಾಲ್ಯದಲ್ಲೇ ಪ್ರತಿಜ್ಞೆ ಮಾಡಿ, ಬ್ರಿಟಿಷರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಾ, ಪೊಲೀಸರಿಗೆ ಸಿಗದೇ,ಆಂಗ್ಲರಿಗೆ ಸಿಂಹ ಸ್ವಪ್ನರಂತೆ ಕಾಡಿದರು ಅಜೇಯ ಕ್ರಾಂತಿಕಾರಿ ಚಂದ್ರಶೇಖರ ಆಜಾದ್. ವೀರಭದ್ರ ತಿವಾರಿ ಎಂಬ ಮಿತ್ರನ ದ್ರೋಹಕ್ಕೆ ಬಲಿಯಾಗಿ ಪೋಲೀಸರ ಅಕ್ರಮಣ ಸಿಕ್ಕರೂ 80 ಕ್ಕೂ ಪೋಲೀಸರ ಅಕ್ರಮಣವನ್ನು ಒಬ್ಬಂಟಿಯಾಗಿ ಎದುರಿಸಿ, ಕೊನೆಗೆ ತನ್ನಲ್ಲಿರುವ ಗುಂಡು ಖಾಲಿಯಾಗುತ್ತಿದಂತೆ, ಅಂತಿಮ ಗುಂಡನ್ನು ತನಗೆ ತಾನೇ ಹಾರಿಸಿಕೊಂಡು ತಾಯಿ ಭಾರತಿಗೆ ತನ್ನ ಪ್ರಾಣವನ್ನು ಅರ್ಪಿಸಿದ ಅಮರ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್.

1906 ಜುಲೈ 23ರಂದು ಮಧ್ಯಪ್ರದೇಶದ ಭಾಮಾ ಎಂಬ ಹಳ್ಳಿಯಲ್ಲಿ ಜನಿಸಿದರು, ತಂದೆ ಸೀತಾರಾಮ ತಿವಾರಿ ಮತ್ತು ತಾಯಿ ಜಗರಾಣಿದೇವಿ. ಅವರದು ಬಹಳ ಬಡ ಕುಟುಂಬ, ಸೀತಾರಾಮ ತಿವಾರಿ ಒಂದು ತೋಟದಲ್ಲಿ ಮಾಲಿಯಾಗಿ ಕೆಲಸ ಮಾಡುತ್ತಿದ್ದರು. ಚಂದ್ರಶೇಖರ ಮನೆಗೆ ಸಹಾಯ ಮಾಡಲು ಓದನ್ನು ಬಿಟ್ಟು ಕೆಲಸಕ್ಕೆ ಸೇರಿದರು, ಹೆಚ್ಚು ಹಣ ಸಂಪಾದಿಸಬೇಕೆಂದು ಮುಂಬಯಿಗೆ ಹೋದರು. ಅಲ್ಲಿ ಕೂಕಿ ಕೆಲಸ ಮಾಡಿದರು, ಆದರೂ ಸಮಾಧಾನವಾಗಲಿಲ್ಲ, ಓದಿ ಸಂಸ್ಕೃತ ವಿದ್ವಾಂಸನಾಗಬೇಕೆಂದು ಕಾಶಿಗೆ ಹೋದರು, ನಂತರ ಪೂರ್ಣ ಪ್ರಮಾಣದ ಹೋರಾಟಕ್ಕೆ ಧುಮುಕಿದ ಆಜಾದ್ ಕ್ರಾಂತಿಕಾರಿ ರಾಮಪ್ರಸಾದ್ ಬಿಸ್ಮಿಲ್ ಅವರ ಶಿಷ್ಯನಾಗಿ ಹಿಂದೂಸ್ತಾನ್ ರಿಪಬ್ಲಿಕನ್ ಆರ್ಮಿಗೆ ಕ್ರಾಂತಿಕಾರಿ ಚಟುವಟಿಕೆ ನಡೆಸಲು, ಹಣವನ್ನು ದೋಚಬೇಕೆಂದು ಬಿಸ್ಮಿಲರು ನಿರ್ಧರಿಸಿದರು,

1925 ಆಗಸ್ಟ್ 9 ರಂದು ಕಾಕೋರಿ ಎಂಬಲ್ಲಿ ದರೋಡೆ ನಡೆಯಿತು. ಸರ್ಕಾರಿ ಖಜಾನೆಯನ್ನು ಕ್ರಾಂತಿಕಾರಿಗಳು ಲೂಟಿ ಮಾಡಿದರು. ಪೋಲೀಸರು ಎಲ್ಲ ಕ್ರಾಂತಿಕಾರಿಗಳನ್ನು ಬಂಧಿಸಿದರು, ಆದರೆ ಒಬ್ಬ ಮಾತ್ರ ಸಿಗಲಿಲ್ಲಿ ಅವನೇ ಆಜಾದ್.

ಬ್ರಿಟೀಷ್ ಸರ್ಕಾರಕ್ಕೆ ಎಚ್ಚರಿಕೆಯ ಸಂದೇಶವನ್ನು ನೀಡಲು ಪಾರ್ಲಿಮೆಂಟಿನಲ್ಲಿ ಬಾಂಬ್ ಸ್ಫೋಟಿಸಲು ಹಿಂದುಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿ ನಿರ್ಧರಿಸಿತು. ಭಗತ್ ಸಿಂಗ್ ಮತ್ತು ಬುಟುಕೇಶ್ವರ ದತ್ತ ಅಸ್ಸೆಂಬ್ಲಿಯಲ್ಲಿ ಬಾಂಬ್ ಸ್ಫೋಟಿಸಿ ಬ್ರಿಟೀಷರ ವಿರುದ್ಧ ಪ್ರತಿಭಟಿಸಿ ಪೋಲೀಸರಿಗೆ ಶರಣಾದರು. ಈ ಯೋಜನೆಯು ಆಜಾದ್ ಮಾರ್ಗದರ್ಶನದಲ್ಲಿ ನಡೆಯಿತು, ಆಜಾದ್ನನ್ನು ಹುಡುಕಲು ತೀವ್ರ ಪ್ರಯತ್ನವನ್ನು ಪೋಲೀಸರು ನಡೆಸಿದರು, ಆಜಾದ್ ಪೋಲೀಸರಿಗೆ ಸಿಗದೇ ಚಳ್ಳೇ ಹಣ್ಣು ತಿನ್ನಿಸುತ್ತದ್ದ ಕೈಗೆ ಸಿಕ್ಕರೂ ಸಿಗದಂತೆ ತಪ್ಪಿಸಿಕೊಂಡು ಬಿಡುತ್ತಿದ್ದ.

1931 ಫೆಬ್ರವರಿ 27ರಂದು ಆಜಾದ್ ಒಬ್ಬರನ್ನು ಭೇಟಿ ಮಾಡಲು ಅಲಹಾಬಾದಿನ ಆಲ್ಫ್ರೆಡ್ ಪಾರ್ಕಿನ ಕಡೆ ಹೊರಟ. ಈ ವಿಷಯವನ್ನು ವೀರಭದ್ರ ತಿವಾರಿ ಎಂಬ ದೇಶದ್ರೋಹಿ ಪೊಲೀಸರಿಗೆ ತಿಳಿಸಿದ. ಎಂಬತ್ತು ಮಂದಿ ಪೋಲೀಸರು ಪಾರ್ಕ್

ಸುತ್ತ ಸುತ್ತುವರೆದರು, ಕಾರಿನಲ್ಲಿ ಬಂದ ನಾಟಬಾಪರ್ ಎಂಬ ಅಧಿಕಾರಿ ಆಜಾದ್ ತೊಡೆಗೆ ಗಿರಿಯಿಟ್ಟು ಹೊಡೆದ, ಆ ಗುಂಡು ಆಜಾದ್‌ಗೆ ತಾಕಿತು.

ಅಪಾಯದ ಅರಿವಾದ ಕೂಡಲೇ ಆಜಾದ್ ತನ್ನ ಸ್ನೇಹಿತನನ್ನು ರಕ್ಷಿಸಿ ಹೋರಾಟಕ್ಕೆ ಸಜ್ಜಾದ ಕೈಯಲ್ಲಿ ಬಂದೂಕು ಹಿಡಿದು ಒಂದೇ ಸಮನೆ ಗುಂಡು ಹಾರಿಸಿದ. 80 ಪೊಲೀಸರು ಮತ್ತು ಒಬ್ಬ ಆಜಾದ್ ಚಿರತೆಯಂತೆ ಓಡಾಡುತ್ತಾ ಪೊಲೀಸರಿಗೆ ತಕ್ಕ ಉತ್ತರ ನೀಡಿದ, ಅರ್ಧ ಗಂಟೆಗೂ ಹೆಚ್ಚು ಕಾಲ ಯುದ್ಧ ಮಾಡಿದ ಆಜಾದ್ಗೆ ತನ್ನ ಬಳಿಯಿರುವ ಗುಂಡಿನ ಲೆಕ್ಕವಿತ್ತು ಕೊನೆಯ ಗುಂಡು ಉಳಿದಿತ್ತು, ಜೀವಂತವಾಗಿ ಪೊಲಲೀಸರ ಕೈಗೆ ಸಿಗಬಾರದೆಂದು ನಿರ್ಧರಿಸಿದ್ದ ಆಜಾದ್ ಆ ಒಂದು ಗುಂಡನ್ನು ತಲೆಗೆ ಹೊಡೆದುಕೊಂಡು. ಸೇನಾನಿಯಂತೆ ತನ್ನ ತಾಯಿ ಭಾರತಿಗೆ ಕುಸುಮದಂತೆ, ತನ್ನ ಪ್ರಾಣವನ್ನು ಅರ್ಪಿಸಿದ, ಆಜಾದ್ ಅವರ ಅಪ್ರತಿಮ ದೇಶಪ್ರೇಮ, ಸಂಘಟನಾ ಕೌಶಲ್ಯ, ಚತುರತೆ ನಮಗೆ ಆದರ್ಶವಾಗಲಿ ಆಜಾದ್ ಎಂಬ ಅಮರ ಕ್ರಾಂತಿಕಾರಿ ನಮ್ಮೆಲ್ಲರ ಹೃದಯದಲ್ಲಿ ನೆಲೆಸಲಿ.



**ಅರ್ಪಿತ ಟಿ.ಕೆ.**

**ಬಿ.ಇಡಿ ಪ್ರಶಿಕ್ಷಣಾರ್ಥಿ**

## ಬಸವಣ್ಣ

ಹನ್ನೆರಡನೇ ಶತಮಾನದ ವಚನಕಾರರ ಪೈಕಿ ಬಸವಣ್ಣನವರಿಗೆ ದೊಡ್ಡ ಸ್ಥಾನ ಅಕ್ಕಮಹಾದೇವಿ,ಅಲ್ಲಮಪ್ರಭು ದಾರಿಯಲ್ಲಿ ಸಾಗಿದರೆ ಬಸವಣ್ಣನವರು ದೃಷ್ಟಿ ಮಾತ್ರ ವಿಭಿನ್ನವಾಗಿತ್ತು. ಹೀಗಾಗಿ ಬಸವಣ್ಣನವರು ವಚನಗಳು ಬಹಳಷ್ಟು ಪ್ರಸಿದ್ಧಿ ಪಡೆದಿದೆ.

ಬಸವಣ್ಣನವರು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ಗ್ರಾಮದಲ್ಲಿ 1134 ರಲ್ಲಿ ಜನಿಸಿದರು. ಶ್ರೀ ಮಾದರಸ ಮತ್ತು ಮಾದಲಾಂಬಿಕೆ ಬಸವಣ್ಣರ ಅಪ್ಪ ಅಮ್ಮ ಬಸವಣ್ಣನವರ ಲಿಂಗಾಯಿತ ಸಮುದಾಯದ ಸ್ಥಾಪಕರು. ಬಸವಣ್ಣನವರು ಎಂಟನೇ ವಯಸ್ಸಿನಲ್ಲಿ ಇದ್ದಾಗ ಅವರಿಗೆ ಜನಿವಾರ ಕಟ್ಟಲು ಹೋದಾಗ ಅವರ ತಮಗಿಂತ ದೊಡ್ಡವಳಾದ ಸಹೋದರಿ ನಾಗಮ್ಮನಿಗೆ ಕಟ್ಟಲು ಹೇಳುತ್ತಾರೆ ಆ ಸಮಯದಲ್ಲಿ ಹಿರಿಯರು ಇದು ಪುರುಷರಿಗೆ ಮಾತ್ರ ಕಟ್ಟಬೇಕು ಮಹಿಳೆಯರೇ ಕಟ್ಟುವಂತಿಲ್ಲ ಎಂದು ಹೇಳಿದಾಗ ಪುರುಷ ಮತ್ತು ಮಹಿಳೆಯರ ಸಮಾನತೆ ಇರಬೇಕು ಭೇದಭಾವ ಇರಬಾರದು ಎಂದು ಹೇಳಿ ಮನೆ ಬಿಟ್ಟು ಹೊರಟು ಹೋಗುತ್ತಾರೆ.

ನಂತರ ಬಸವಣ್ಣರ ಕೂಡಲಸಂಗಮಕ್ಕೆ ತೆರಳಿ ಉತ್ತರ ಸುಮಾರು ಹನ್ನೆರಡು ವರ್ಷಗಳ ಕಾಲ ಕೂಡಲಸಂಗಮದಲ್ಲಿ ಆಧ್ಯಾತ್ಮದಲ್ಲಿ ತೊಡಗಿಸಿಕೊಳ್ಳುತ್ತಾರೆ. ದೇವರು ಬೇರೆ ಎಲ್ಲಿಯೂ ಇಲ್ಲ ನಮ್ಮೊಳಗೆ ಇದ್ದಾನೆ ಎಂದು ಬಸವಣ್ಣನವರು ನಂಬಿದ್ದರು, ಸುಳ್ಳು ಹೇಳುವುದು ಕೊಲೆ ಸುಲಿಗೆ ಪ್ರಾಣಿಬಲಿ ಹಿಂಸೆ ಯಾವುಧೆ ಇಷ್ಟವಾಗುತ್ತಿರಲಿಲ್ಲ.

ಬಸವಣ್ಣನವರಿಗೆ ಕ್ರಾಂತಿಯೋಗಿ ಬಸವಣ್ಣ, ಮಹಾಮಾನತಾವಾದಿ ಎಂಬ ಹೆಸರುಗಳು ಕೂಡ ಇವೆ. ಸಮಾನತೆ ಕಾಯಕ ತತ್ವಗಳನ್ನು ಅಚರಿಸುವ ಮತ್ತು ಪಾಲಿಸುವ ಯಾರು ಬೇಕಾದರು ಶಿವಶರಣರಾಗಬಹುದು ಅನ್ನೋದು ಬಸವಣ್ಣನವರು ದೃಷ್ಟಿಕೋನವಾಗಿತ್ತು. ಬಸವಣ್ಣನವರ ವಚನಗಳು ಅಂಕಿತ ಕೂಡಲಸಂಗದೇವ ಕಾಯಕವೇ ಕೈಲಾಸ ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ ಹೀಗೆ ಹಲವು ವಚನಗಳನ್ನು ಅವರು ಸಮಾಜದಲ್ಲಿ ಸಾರುತ್ತ ಮುಂ ಸಾಗಿದರು.



**ಅಶ್ವಿನಿ. ಡಿ.ಎಸ್**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಬಾಲಗಂಗಾಧರ್ ತಿಲಕ್.

ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೆಚಿಸಿದ ಬಾಲಗಂಗಾಧರ್ ತಿಲಕರು ಅನೇಕಕಾಲ ವೀರಾವೇಶದಿಂದ ಹೋರಾಡಿದರು. ಈ ಮಹಾನ್ ನಾಯಕನ ಬದುಕೇ ಒಂದು ಮಹೋನ್ನತ ಸಂದೇಶವಾಗಿತ್ತು."ಅಶಾಂತಿಯ ಜನಕ" ಬದುಕಿನ ಮೈಲುಗಲ್ಲುಗಳಉ ಮತ್ತು ಸಾದಧನೆಯನ್ನು ನೆನಪಿಸಿಕೊಳ್ಳುವ ಯತ್ನ ಇಲ್ಲಿದೆ.

ಸ್ವರಾಜ್ಯ ನನ್ನ ಜನ್ಮ ಸಿದ್ದ ಹಕ್ಕು,ಅದನ್ನು ಪಡೆದೇ ತೀರುತ್ತೇನೆಎಂದು ಇಡಿ ಅಖಂಡ ಭಾರತದ ಜನತೆಗೆ ಪ್ರೇರಣೆ ನೀಡಿದ ಲೋಕಮಾನ್ನಯ ಬಾಲಗಂಗಾಧರ ತಿಲಕರು ಹುಟ್ಟಿದ್ದು ಜುಲೈ 23/ 1865 ರಂದು ಮಹಾರಾಷ್ಟ್ರಾದ ರತ್ನಗಿರಿಯಲ್ಲಿ ತಂದೆ ಗಂಗಾಧರ ತಿಲಕರು,ತಾಯಿ ಪಾರ್ವತಿಬಾಯಿ ಹತ್ತನೆಯ ವಯಸ್ಸಿಗೆ ತಾಯಿಯನ್ನ 16ನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡು ತಿಲಕರು ಬಿಎ ಎಲ್ ಎಲ್ ಬಿ ಶಿಕ್ಷಣವನ್ನು ಕಡು ಬಡತನದಲ್ಲಿ ಮುಗಿಸಿ ಉನ್ನತ ಸರ್ಕಾರಿ ಉದ್ಯೋಗವನ್ನು ತಿರಸ್ಕರಿಸಿ ದೇಶಸೇವೇಗಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟರು.

ಭಾರತ ಸ್ವಾತಂತ್ರ್ಯ ಸಂಗಾಮದ ಮೊದಲನೇ ಸಾಮೂಹಿಕ ನಾಯಕನ ತಿಲಕರು ವೈವಿಧ್ಯಪೂರ್ಣ,ವಿಶಿಷ್ಟ ವ್ಯಕ್ತಿತ್ವ,ಪತ್ರಕರ್ತರಾಗಿ,ಶಿಕ್ಷಕರಾಗಿ ಲೇಖಕರಾಗಿ,ಸ್ವದೇಶಿ ಉದ್ಯಮಿಯಾಗಿ,ರಾಜಕೀಯದ ನೇತಾರರಾಗಿ, ಹಿಂದೂ,ಮುಸ್ಲಿಂ ಐಕ್ಯತೆ ಪುರುಷರಾಗಿ ಸಮಾ ಸುಧಾರಕರಗಿ,ರಾಷ್ಟೀಯ ನಾಯಕರಗಿ ಸಮಾಜ ಸುಧಾರಕರಾಗಿ,ರಾಷ್ಟೀಯ ನಾಯಕರಾಗಿ ಪ್ರಚಂಡ ಜನಜಾಗೃತಿಯ ಮೂಡಿಸಿದ ಅವರ ವ್ಯಕ್ತಿತ್ವ ಸರಿಸಾಟಿಯಿಲ್ಲ.

ಬ್ರಿಟಿಷರ ವಿರುದ್ದ ಭಾರತ ಪ್ರಜೆಗಳ ತೀವ್ರಾ ಆಕ್ರೋಶಕ್ಕೆ ಜನಕ ಎಂದೇ ಬ್ರಿಟಿಷರು ಅವರನ್ನು ಕರೆದರು.ಬ್ರಿಟಿಷರ ವಿರುದ್ದ ಭಾರತದಲ್ಲಿ ಮಾತ್ರವಲ್ಲದೆ ಬ್ರಿಟನ್ನಲ್ಲಿ ತೀವ್ರ ಹೋರಾಟ ನೆಡೆಸಿದರು. ಇಂಗ್ಲೆಂಡಿನ ಚಿರೋಲ್ ಎಂಬ ಪತ್ರಕರ್ತರು ಭಾರತಕ್ಕೆ ಭೇಟಿ ನೀಡಿದಾಗ ತಿಲಕರು ನಡೆಸುತ್ತಿದ್ದ ಹೋರಾಟವನ್ನು ಗಮನಿಸಿ ತಿಲಕರ ಬಗ್ಗೆ ಇಲ್ಲಸಲ್ಲದ ಆರೋಪ ಹೊರಿಸಿದಾಗ ಚಿರೋಲ್ ಮೇಲೆ ಮಾನಹಾನಿ ಮೊಕದ್ದಮೆಯನ್ನು ಹೊಡಿ13ತಿಂಗಳ ಕಾಲ ಇಂಗ್ಲೆಂಡ ನಲ್ಲಿ ಮೊಕದ್ದಮೆಯನ್ನು 13ತಿಂಗಳ ಕಾಲ ಆಡಳಿತ ವೈಖರಿಯನ್ನು ತಿಳಿಸಿ ಹಲವು ಸುಧಾರಣೆಯನ್ನು ತರಲು ಕಠಿಣ ಶ್ರಮ ಪಟ್ಟರು



**ಅಶ್ವಿನಿ. ಡಿ.ಎಸ್**
ಬಿ.ಇಡಿ ಪ್ರಶಿಕ್ಷಣಾರ್ಥಿ

# ಸರ್ ಎಂ ವಿಶ್ವೇಶ್ವರಯ್ಯ

ವಿಶ್ವೇಶ್ವರಯ್ಯನವರು ಜನಿಸಿದ್ದು ಸಪ್ಟಂಬರ್ 15.1860 ರಲ್ಲಿಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ ಎಂಬಲ್ಲಿ ವಿಶ್ವೇಶ್ವರಯ್ಯನವರು ತಂದೆ "ಶ್ರೀನಿವಾಸ ಶಾಸ್ತ್ರಿ" ತಾಯಿ ವಂಕಟಲಕ್ಷ್ಮಮ್ಮ ಅವರ ಪೂರ್ವಜರು ಈಗಿನ ಆಂಧ್ರಪ್ರದೇಶದ "ಮೋಕ್ಷಗುಂಡಂ ಎಂಬ ಸ್ಥಳದಿಂದ ವಲಸೆ ಬಂದು ಮುದ್ದೇನಹಳ್ಳಿಯಲ್ಲಿ ವಾಸವಾಗಿದ್ದ ಕಾರಣ ಅವರ ಹೆಸರಿನೊಡನೆ ಮೋಕ್ಷಗುಂಡಂ ಸೇರಿಕೊಂಡಿದೆ ವಿಶ್ವೇಶ್ವರಯ್ಯನವರ ತಂದೆ ಸಂಸ್ಕ್ರತ ವಿದ್ವಾಂಸರು ಧರ್ಮಶಾಸ್ತ್ರಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರಲ್ಲದೆ ಆಯುರ್ವೇದ ತಜ್ಞರು ಆಗಿದ್ದರು ಅವರು 15 ವರ್ಷದವರಿದ್ದಾಗಲೆ ತಂದೆಯು ನಿಧನರದರು ವಿಶ್ವೇಶ್ವರಯ್ಯನವರು ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ಮತ್ತು ಪ್ರೌಢ ಶಿಕ್ಷಣ ಬೆಂಗಳೂರಿನಲ್ಲಿ ನಡೆಯಿತು 1881ರಲ್ಲಿ ಮದ್ರಾಸು ವಿಶ್ವವಿದ್ಯಾಲಯದಿಂದ ಬಿ.ಎ ಪದವಿಯನ್ನು ಪಡೆದು ನಂತರ ಪುಣೆಯ ವಿಜ್ಞಾನ ಕಾಲೇಜಿನಂದ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದರು.

ವಿಶ್ವೇಶವರಯ್ಯ ಇಂಡಸ್ಟ್ರಿಯಲ್ ಮ್ಯುಸಿಯಂನಿಂದ 1908 ಸ್ವಯಂ ನಿವೃತ್ತಿ ಘೋಷಿಸಿದ ನಂತರ ವಿಶ್ವೇಶವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸಿದರು, ಮಹಾರಾಜ ಕೃಷ್ಣರಾಜ ಒಡೆಯರ್‌ರವರ ಜೊತೆ ಮೈಸೂರು ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಕೆಲಸ ಮಾಡಿದರು, 1917ರಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದರು, ಇದೇ ಕಾಲೇಜಿಗೆ ನಂತರ ಅವರ ಹೆಸರನ್ನೆ ಇಡಲಾಯಿತು.

- 1885– ಬಾಂಬೆಯಲ್ಲಿ ಸರ್ವಿಸ್ ಇಂಜಿನಿಯರ್ ಆಗಿ ನೇಮಕ, ನಾಸಿಕ್ ಮತ್ತು ಪುಣೆಯಲ್ಲಿ ಕಾರ್ಯ ನಿರ್ವಹಣೆ
- 1894 – ಸಿಂಧ್ ಪ್ರಾಂತದ ಸುಕ್ಕೂರ್ ಪುರಸಭೆಯಲ್ಲಿ ನೀರು ಸರಬರಾಜು ಸಂಭಂದಪಟ್ಟ ವಿನ್ಯಾಸ ಹಾಗೂ ಕಾರ್ಯ ನಿರ್ವಹಣೆ.
- 1897–99– ಪುಣೆಯಲ್ಲಿ ಕಾರ್ಯನಿರ್ವಹಕ ಇಂಜಿನಿಯರಾಗಿ ಸೇವೆ.
- 1996 – ಸೂರತ್ನಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಿ ಸೇವೆ.
- 1898 –ಚೀನಾ ಹಾಗೂ ಜಪಾನ್ ಬೇಟಿ.
- 1899– ಪುಣೆಯಲ್ಲಿ ವ್ಯವಸಾಯ ಕಾರ್ಯನಿರ್ವಾಹಕ.
- 1901– ಬಾಂಬೆಯಲ್ಲಿ ಒಳಚರಂಡಿ ಕಾಮಗಾರಿ ಇಂಜಿನಿಯರ್ ಹಾಗೂ ಒಳಚರಂಡಿ ಮಂಡಳಿ ಸದ್ಯಸ.
- 1913– ಮೈಸೂರು ದಿವಾನರಾಗಿ ನೇಮಕ ಸಾರ್ವಜನಿಕ ಕಾಮಗಾರಿ ಹಾಗೂ ರೈಲ್ವೆ ಇಲಾಖೆ ಮೇಲ್ವಿಚಾರಣೆ.

ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಬ್ರೀಟಿಷ್ ಸರ್ಕಾರ ಅವರಿಗೆ "ಸರ್" ಪದವಿಯನ್ನು ನೀಡಿತು. 1955 ರಲ್ಲಿ ಭಾರತ ಸರ್ಕಾರದ ಅತ್ಯುಚ್ಚ ಗೌರವವಾದ ಭಾರತ ರತ್ನ ಲಭಿಸಿತು. ಸರ್ ಎಂ ವಿಶ್ವೇಶ್ವರಯ್ಯನವರು ಭಾರತ ರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ, ಕರ್ನಾಟಕದಲ್ಲಿ ಹೆಚ್ಚಿನ ಶಾಲಾ ಕಾಲೇಜುಗಳು, ಐ.ಟಿ.ಐ, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜುಗಳು ಇವರ ಹೆಸರಿಟ್ಟು ಗೌರವಿಸಲಾಗಿದೆ.

**ಪುಸ್ತಕಗಳು.**

1. ನನ್ನ ವೃತ್ತಿ ಜೀವನದ ನೆನೆಪುಗಳು – ಕನ್ನಡಕ್ಕೆ ಡಾ. ಗಜಾನನ ಶರ್ಮಾ
2. 1920 ಭಾರತವನ್ನು ಪುನಃ ನಿರ್ಮಿಸುವುದು.
3. 1937 ರಾಷ್ಟ್ರ ಕಟ್ಟಡ.



**ಸಾಕಮ್ಮ ಎಂ ಸನ್ನೇರ್**

**ಬಿ.ಇಡಿ ಪ್ರಶಿಕ್ಷಣಾರ್ಥಿ**

## ಜವಾಹರಲಾಲ್ ನೆಹರು

ಪಂಡಿತ್ ಜವಾಹರಲಾಲ್ ನೆಹರು ಅವರು ಪ್ರಮುಖ ನ್ಯಾಯವಾದಿ ಮತ್ತು ರಾಷ್ಟ್ರೀಯವಾದಿ ರಾಜನೀತಿಜ್ಞ, ಮೋತಿಲಾಲ್ ನೆಹರೂ – ಸ್ವರೂಪ್ ರಾಣಿ ಅವರ ಮಗ, ನೆಹರು ಕೇಂಬ್ರಿಡ್ಜ್ ಟ್ರಿನಿಟಿ ಕಾಲೇಜ್ ಪದವಿಧಾರರಾಗಿದ್ದರು.

ಜವಾಹರಲಾಲ್ ನೆಹರು ಬ್ರಿಟಿಷ್ ಭಾರತದ ಅಲಹಬಾದಿನಲ್ಲಿ 14 ನವೆಂಬರ್ 1889 ರಂದು ಜನಿಸಿದರು. ಅವರ ತಂದೆ ಮೋತಿಲಾಲ್ ನೆಹರು ಕಾಶ್ಮೀರಿ ಪಂಡಿತ್ ಸೇರಿದ ಸ್ವ ನಿರ್ಮಿತ ಶ್ರೀಮಂತ ವಕೀಲರು. 1919 ಮತ್ತು 1928 ರಲ್ಲಿ ಭಾರತಿಯ ರಾಷ್ಟ್ರೀಯ ಕಾಂಗ್ರೆಸನ ಅಧ್ಯಕ್ಷರಾಗಿದ್ದರು, ಎರಡು ಬಾರಿ ಸೇವೆ ಸಲ್ಲಿಸಿದರು ಅವರ ತಾಯಿ ಸ್ವರೂಪರಾಣಿ ಲಾಹೋರಿನಲ್ಲಿ ನೆಲೆಗೋಂಡಿದ್ದು, ಪ್ರಸಿದ್ಧ ಕಾಶ್ಮೀರ ಬ್ರಾಹ್ಮಣ ಕುಟುಂಬದಿಂದ ಬಂದವರು, ಜವಾಹರಲಾಲ್ ಮೂವರು ಮಕ್ಕಳಲ್ಲಿ ಹಿರಿಯರಾಗಿದ್ದರು, ಇವರು ಹದಿಮೂರನೇ ವಯಸ್ಸಿನಲ್ಲಿ ಸ್ನೇಹಿತೆ ಅನ್ನಿ ಬೆಸೆಂಟ್ ಅವರಿಂದ ಬೋಧಿಸಲ್ಪಟ್ಟರು ಆದಾಗ್ಯೂ ಥಿಯೋಸಾಫಿಕಲ್ ಸೊಸೈಟಿಯ ತತ್ವಶಾಸ್ತ್ರದ ಬಗೆಗಿನ ಅವರ ಆಸಕ್ತಿಯು ನಂತರ ಶಾಶ್ವತವಾಗಿ ಉಳಿಯಲಿಲ್ಲ ನೆಹರು ಅವರ ತತ್ವಶಾಸ್ತ್ರದ ಈ ಆಸಕ್ತಿಗಳು ಅವರನ್ನು ಬೌದ್ಧ ಮತ್ತು ಹಿಂಧೂ ಧರ್ಮ ಗ್ರಂಥಗಳ ಅಧ್ಯಯನಕ್ಕೆ ಪ್ರೇರೆಪಿಸಿದವು.

ಅಕ್ಟೋಬರ್ 1907 ರಲ್ಲಿ ಕೇಂಬ್ರಿಡ್ಜ್ ಟ್ರಿನಿಟಿ ಕಾಲೇಜ್‌ಗೆ ನೆಹರು ಸೇರಿದರೆ ಮತ್ತು 1910 ನೈಸರ್ಗಿಕ ವಿಜ್ಞಾನದಲ್ಲಿ ಗೌರವ ಪಧವಿ ಪಡೆದರು, ಈ ಅವಧಿಯಲ್ಲಿ ಅವರು ರಾಜಕಾರಣ ಅರ್ಥಶಾಸ್ತ್ರ ಇತಿಹಾಸ ಮತ್ತು ಸಾಹಿತ್ಯವನ್ನು ಶ್ರದ್ದಾ ಪೂರ್ವಕವಾಗಿ ಅಧ್ಯಯನ ಮಾಡಿದರು. 1910ರಲ್ಲಿ ಪದವಿಯನ್ನು ಪೂರ್ಣಗೊಳಿಸಿದ ನಂತರ ನೆಹರು ಲಂಡನ್ನಿಗೆ ತೆರಳಿ ಇನ್ನರ ಟೆಂಪಲ್ ಇನ್‌ನಲ್ಲಿ ಕಾನೂನು ಅಧ್ಯಯನ ಮಾಡಿದರು, ಈ ಸಮಯದಲ್ಲಿ ಅವರು ಬ್ರಿಟನ್ನಿನ ವೆಬ್ ಸೇರಿದಂತೆ ಪ್ಯಾಬಿಯನ್ ಸೊಸೈಟಿಯ ವಿದ್ವಾಂಸರು ಅಧ್ಯಯನವನ್ನು ಮುಂದುವರೆಸಿದರು.

ಆಗಸ್ಟ 1912ರಲ್ಲಿ ಭಾರತಕ್ಕೆ ಹಿಂದಿರುಗಿದ ನಂತರ ನೆಹರು ಅಲಹಾಬಾದ್ ಹೈಕೋರ್ಟನಲ್ಲಿ ವಕೀಲರು ಸೇರಿಕೊಂಡರು ಮತ್ತು ನ್ಯಾಯವಾದಿಯಾಗಿ ನೆಲೆಸಲು ಪ್ರಯತ್ನಿಸಿದರು ಕಾಂಗ್ರೆಸ್ 1912 ರಲ್ಲಿ ಮದ್ಯಮ ವರ್ಗ ಮತ್ತು ಗಣ್ಯರ ಪಕ್ಷವಾಗಿತ್ತು ಅವರು "ಇಂಗ್ಲೀಷ್ ತಿಳುವಳಿಕೆಯಲ್ಲಿ ಉನ್ನತ ವರ್ಗದ ವ್ಯವಹಾರ"ವನ್ನು ಅಲ್ಲಿ ನೋಡಿದ್ದರಿಂದ ಅವರಿಗೆ ಮುಜುಗರದ ಗೊಂದಲ ವಿಚಾರವುಂಟಾಯಿತು 1913 ರಲ್ಲಿ ಚಳುವಳಿಗೆ ಹಣವನ್ನು ಸಂಗ್ರಹಿಸಿದರು ನಂತರ ಅವರು ಬ್ರಿಟಿಷ್ ವಸಹಾತುಗಳಲ್ಲಿ ಭಾರತಿಯರು ಎದುರಿಸಿದರು ಒಂಪ್ಪದಕ್ಕೆ ಒಳಗಾದ ಕಾರ್ಮಿಕರ ಮತ್ತು ಅಂತಹ ಇತರ ತಾರತಮ್ಯಗಳ ವಿರುದ್ದ ಪ್ರಚಾರ ಮಾಡಿದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅದ್ಯಕ್ಷರಾಗಿ 1918–1927ರಲ್ಲಿ ಸೇವೆ. 1919 ರಲ್ಲಿ ಮಗಳು ಇಂದಿರ ಪ್ರಿಯದರ್ಶಿನಿ ಜನಿಸಿದಳು. ಗಾಂಧಿಯವರು ಶಿಷ್ಯನಾದ ಇವರು ಮೊದಲ ಬಾರಿಗೆ 1929 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿ ಉನ್ನತೀಗೇರಿದರು ಭಾರತದ ಮೊದಲ ಪ್ರಧಾನಿಯಾಗಿ 1947–1968 ನೆಹರುರವರು 18 ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿದ್ದರು

ಇವರು 1968 ಮೇ 27 ರಂದು ನಿಧನರಾದರು ಪಂಡಿತ್ ಜವಾಹರಲಾಲ್ ನೆಹರುರವರು 1947 ಅಗಸ್ಟ 14 ರ ಮದ್ಯರಾತ್ರಿ ಸಂಸತ್ತನ್ನುದ್ದೇಶಸಿ ಮಾಡಿದ " ಎ ಟ್ರಸ್ಟ್ ವಿಥ್ ಡೆಸ್ಟಿನಿ" ಬಾಷಣ ಪ್ರಸಿದ್ದವಾಗಿದೆ.



**ಸಾಕಮ್ಮ ಎಂ ಸನ್ನೇರ್**

**ಬಿ.ಇಡಿ ಪ್ರಶಿಕ್ಷಣಾರ್ಥಿ**

# ಲಾಲ್ ಬಹದ್ದೂರಶಾಸ್ತ್ರಿ

ಲಾಲ್ ಬಹಾದುರ್ ಮೊಘಲ್ ಸಾರಾಯ್‌ನಲ್ಲಿ ಜನಿಸಿದ್ದು. 1921ರಲ್ಲಿ ಮಹಾತ್ಮ ಗಾಂಧಿಯವರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ಇವರು ತಮ್ಮ ಓದನ್ನು ಅರ್ಧದಲ್ಲೇ ಬಿಟ್ಟರು. 1926 ರಲ್ಲಿ ಇವರಿಗೆ ಶಾಸ್ತ್ರಿ ಎಂಬ ಬಿರುದು ಕಾಶಿ ವಿದ್ಯಾ ಪೀಠದಿಂದ ಕೊಡಲ್ಪಟ್ಟಿತು. ಒಟ್ಟು 9 ವರ್ಷಗಳ ಕಾಲ ಸ್ವಾತಂತ್ರ್ಯಕ್ಕಾಗಿ ಕಾರಾಗೃಹವಾಸ ಅನುಭವಿಸಿದ ಇವರು ಸತ್ಯಾಗ್ರಹ ಚಳುವಳಿ ಪ್ರಾರಂಭವಾದ ನಂತರ 1946 ರವರೆಗೂ ಜೈಲು ಶಿಕ್ಷೆ ಅನುಭವಿಸಿದರು.

ಸ್ವಾತಂತ್ರ ದೊರಕಿದ ಬಳಿಕ ಇವರು ಗೋವಿಂದ ವಲ್ಲಭ ಪಂತ್ ಅವರ ಸರಕಾರದಲ್ಲಿ ಪೋಲಿಸ್ ಖಾತೆಯನ್ನು ವಹಿಸಿಕೊಂಡಿದ್ದರು. 1951ರಲ್ಲಿ ಇವರು ಲೋಕ ಸಭೆಗೆ ಜನರಲ್ ಸೆಕ್ರೆಟರಿ ಆಗಿ ಆಯ್ಕೆಯಾದರು. ಇದರ ಪರ್ಯಾಯ ಇವರು ರೈಲ್ವೆ ಖಾತೆಯನ್ನು ವಹಿಸಿಕೊಂಡಿದ್ದೂ ಉಂಟು.

ಅರಿಯಳೂರು ಬಳಿ ಆದ ರೈಲ್ವೆ ದುರಂತದ ತರುವಾಯ ಇವರು ತಮ್ಮ ಖಾತೆಗೆ ರಾಜೀನಾಮೆ ನೀಡಿದರು. ಮತ್ತೊಮ್ಮೆ ಇವರು ಕ್ಯಾಬಿನೆಟ್‌ಗೆ ಮರಳಿದರು. ಮೊದಲು ಸಾರಿಗೆ ಮಂತ್ರಿ ಯಾಗಿ, ಬಳಿಕ 1961ರಲ್ಲಿ ಗೃಹ ಮಂತ್ರಿಯಾಗಿದ್ದರು. ಮೇ 27, 1964ರಂದು ಜವಾಹರ್‌ಲಾಲ್ ನೆಹರು ತಮ್ಮ ಕಾರ್ಯಕಾಲದಲ್ಲಿ ಸಾವನ್ನಪ್ಪಿದರು.ಸ್ವಲ್ಪ ಮಟ್ಟಿಗೆ ಖಾಲಿ ಖಾಲಿಯಾದ ರಾಜಕೀಯ ರಂಗವನ್ನು ಬಿಟ್ಟು ಅಗಲಿದ್ದರು. ಕಾಂಗ್ರೆಸ್‌ನ ಕೆಲವು ಪ್ರಮುಖ ಆಸ್ತಿಗಳಿಗೆ ತಮಗೆ ಬೇಕಾದ ಬೆಂಬಲ ಸಿಗದ ಕಾರಣ ತುಂಬಾ ಸರಳ ಅಧಿಕಾರ ದಾಹಿಯೇ ಅಲ್ಲದ ಶಾಸ್ತ್ರಿಗಳಿಗೆ ಪ್ರಧಾನಿಯಾಗಲು ಅವಕಾಶ ಸಿಕ್ಕಿತು. ಇವರು ಅದೇ ವರ್ಷ ಜೂನ್ 9 ರಂದು ಭಾರತದ ಪ್ರಧಾನಿಯಾದರು. ಆಗಿನ ಪ್ರಮುಖ ಸಮಸ್ಯೆ ಪಾಕಿಸ್ತಾನವಾಗಿತ್ತು. ಕಚ್ ಬಳಿ ನಡೆದ ಯುದ್ಧ ಯುಎನ್ ಮಧ್ಯಸ್ಥಿಕೆಯಿಂದ ನಿಂತು ಜಮ್ಮು–ಛಕಾಶ್ಮೀರದಲ್ಲಿ ಮತ್ತೊಮ್ಮೆ ಪ್ರಾರಂಭವಾಯಿತು. ಎರಡನೇ ಭಾರತ–ಪಾಕ್ ಯುದ್ಧ ಪ್ರಾರಂಭವಾಗಿ ಭಾರತದ ಪಡೆ ಲಾಹೋರ್ ತಲುಪುತ್ತಲೇ ಶಾಂತಿ ಒಪ್ಪಂದ ಮಾಡಿ ಕೊಳ್ಳಲಾಯಿತು.

ಜನವರಿ 1966ರಲ್ಲಿ ಶಾಸ್ತ್ರಿ ಮತ್ತು ಮಹಮ್ಮದ್ ಆಯೂಬ್ ಖಾನ್ ಅಲೆಕ್ಸೈ ನಿಕೊಲಯೆವಿಚ್ ಕೊಸಿಜಿನ್ ಅವರಿಂದ ಆಯೋಜಿಸಲಾದ ಟಾಷ್ಕೆಂಟ್‌ನಲ್ಲಿ ನಡೆದ ಮಾತುಕತೆಯಲ್ಲಿ ಭಾಗವಹಿಸಿದರು. ಶಾಸ್ತ್ರಿಗಳು ಭಾರತದೊಂದಿಗೆ ಜನವರಿ 10 ರಂದು ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಅದೇ ಟಾಶ್ಕೆಂಟ್ ಡಿಕ್ಲೆರೇಶನ್. ಮರುದಿನವೇ ಅವರು ಹೃದಯಾಘಾತದಿಂದ ಸಾವನ್ನಪ್ಪಿದರು; ಆದರೆ ಪಾಕಿಸ್ತಾನದವರೇ ಅವರ ಊಟದಲ್ಲಿ ವಿಷವನ್ನು ಹಾಕಿ ಕೊಂದರು ಎಂಬ ಊಹೆ ಇದೆ. ಆದರೆ ಅದನ್ನು ಅಲ್ಲಿಯ ವೈದ್ಯರು ದೃಡಪಡಿಸಿಲ್ಲ. ಇವರು ಕಾರ್ಯಕಾಲದಲ್ಲಿ ದೇಶದಾಚೆ ಸಾವನ್ನಪ್ಪಿದ ಏಕೈಕ ಭಾರತದ ಪ್ರಧಾನ ಮಂತ್ರಿ ಹಾಗು ಈ ತರಹದ ದುರಂತಕ್ಕೆ ತುತ್ತಾದ ಇತಿಹಾಸದ ಬಹುಶಃ ಕೆಲವೇ ಕೆಲವು ಸರಕಾರದ ಮುಖ್ಯಸ್ಥರಲ್ಲಿ ಒಬ್ಬರು.

ಇವರು ಬಹುಶಃ ಭಾರತ ಕಂಡ ಅತ್ಯಂತ ಪ್ರಾಮಾಣಿಕ, ದಕ್ಷ ಪ್ರಧಾನಿಯಾಗಿದ್ದಾರೆ. ಇವರ ಪ್ರಾಮಾಣಿಕತೆಗೆ ಹಲವರು ತಲೆದೂಗಿದ್ದುಂಟು. ಹಾಗೆಯೇ ಇವರ ಸ್ವಾಭಿಮಾನ, ದೇಶಾಭಿಮಾನ ಕೂಡ ತಲೆದೂಗುವಂಹತದ್ದು. ಇವರು ಭಾರತವನ್ನು ಸ್ವಾಭಿಮಾನಿ ದೇಶವಾಗಿ ಮಾಡುವಲ್ಲಿ ಶ್ರಮವಹಿಸಿದ್ದಾರೆ. ಅವರು ಪ್ರಧಾನಿಯಾದ ಸಂದರ್ಭದಲ್ಲಿ ದೇಶದಲ್ಲಿ ಬರಗಾಲ ಬಂದೊದಗಿತು. ಆಗ ಹೊರ ದೇಶದಿಂದ ಆಹಾರವನ್ನು ಆಮದು ಮಾಡಿಕೊಳ್ಳಬೇಕಾಯಿತು. ಸಾಲ ಭಾರ ಅಧಿಕವಾಯಿತು. ಅದನ್ನರಿತ ಶಾಸ್ತ್ರಿ ವಾರದಲ್ಲಿ ಒಂದು ದಿನ ಊಟವನ್ನು ಬಿಟ್ಟರೆ ಎಷ್ಟು ಆಹಾರ ಸಂಗ್ರಹ ವಾಗುವುದೆಂದು ಲೆಕ್ಕಾಚಾರಹಾಕಿ, ಸೋಮವಾರ ರಾತ್ರಿ ಊಟವನ್ನು ಬಿಡಲು ಸಾರ್ವಜನಿಕರಲ್ಲಿ ಮನವಿ ಮಾಡಿದರು. ತಾವೂ ಸಹ ಸೋಮವಾರದ ಊಟವನ್ನು ತ್ಯಜಿಸಿದರು. ಇನ್ನೂ ಸಹ ಶಾಸ್ತ್ರಿಯವರ ಸೋಮವಾರವು ಪ್ರಚಲಿತದಲ್ಲಿದೆ. ಈ ನಿರ್ಣಯವು ಅವರ ಸ್ವಾಭಿಮಾನ ಯಾತ್ರೆಗೆ ಮುಕುಟ ಪ್ರಾಯದಂತಿದೆ.



**ಶೃತಿ.ಕೆ.ಪಿ**

**ಬಿ.ಇಡಿ ಪ್ರಶಿಕ್ಷಣಾರ್ಥಿ**

# ಭಗತ್ಸಿಂಗ್

**ಭಗತ್ಸಿಂಗ್**(೧೯೦೭-೧೯೩೧)

ಭಾರತ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಮತ್ತು ಸ್ವಾತಂತ್ರ್ಯ ಹೋರಾಟಗಾರ, ಇವರು ಜರನ್ವಾಲ ತಾಲ್ಲೂಕಿನ ಬಂಗಾ ಎಂಬಹಳ್ಳಿಯಲ್ಲಿ ಜನಿಸಿದರು ಇವರ ತಾಯಿ ಶ್ರೀಮತಿ ವಿದ್ಯಾವತಿ ಮತ್ತು ಜೀವ ವಿಮಾ ಕಂಪನಿಯಲ್ಲಿ ಎಜೆಂಟರಾಗಿ ವೃತ್ತಿ ಮಾಡುತ್ತಿದ್ದ ತಂದೆ ಕಿಶನ್ಸಿಂಗ್. ಭಗತ್ಸಿಂಗ್ರ ಮೇಲೆ ಅತೀವ ಪ್ರಭಾವವನ್ನು ಬೀರಿದ್ದವರೆಂದರೆ ಅವರ ಚಿಕ್ಕಪ್ಪ ಅಜಿತ್ಸಿಂಗ್.

